

MAG(2) PRB/CR/70/2022-23 REG NO: KARKAN27951

# ಮುಂಜಾನೆ ವಾರ್ತೆ

ಇ-ಪೇಪರ್: www.munjaneevartheepaper.com

EDITOR: H.L.AMARANATH

MUNJANE VARTHE

ಸಂಪಾದಕ: ಹೆಚ್.ಎಲ್ ಅಮರನಾಥ್

ಕನ್ನಡ ದಿನಪತ್ರಿಕೆ



ಜಾಹೀರಾತಿಗಾಗಿ ಸಂಪರ್ಕಿಸಿ 9663122276

website: munjanevarthe.com



Volume: 02 Issue: 97 | ಸಂಪುಟ: 02 ಸಂಚಿಕೆ: 97 ಪುಟಗಳು: 04 | munjanevarthe | 22 WEDNESDAY MAY 2024 | 22 ಬುಧವಾರ ಮೇ 2024 | ₹ 2



**ಪೊಲೀಸರ ಸರ್ಪಗಾವಲು ನಡುವೆ ಕೆನಾಲ್ ಮುಚ್ಚಿ ಪ್ರತಿಭಟನೆ** ವಿವರಪುಟ 02

**ಪೈಪ್ ಲಾರಿಗಳನ್ನು ತಡೆದು ದಿಢೀರ್ ಪ್ರತಿಭಟನೆ** ವಿವರಪುಟ 03

**ಗಾಂಧಿ ಮಂದಿರದಲ್ಲಿ ರಾಜೀವ್ ಗಾಂಧಿ ಪುಣ್ಯತಿಥಿ** ವಿವರಪುಟ 04


# ತ.ನಾಡಿಗೆ ಮತ್ತೆ ಕಾವೇರಿ

ನವದೆಹಲಿ: ತಮಿಳು ನಾಡಿಗೆ ಮತ್ತೆ 2.5 ಟಿಎಂಸಿ ನೀರು ಹರಿಸುವಂತೆ ಕರ್ನಾಟಕಕ್ಕೆ ಮಂಗಳವಾರ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನಿರ್ದೇಶನ ನೀಡಿದೆ. ಇಂದು ಮಂಗಳವಾರ ನಡೆಸಿದ ಸಭೆಯಲ್ಲಿ ಪ್ರಾಧಿಕಾರ, ಮೇ ತಿಂಗಳ ಭಾಗವಾಗಿ 2.5 ಟಿಎಂಸಿ ಹರಿಸಲು ನಿರ್ದೇಶನ ನೀಡಿದೆ. ಈ ಹಿಂದೆ ಕಾವೇರಿ ನೀರು ನಿಯಂತ್ರಣ ಸಮಿತಿಯೂ 2.5 ಟಿಎಂಸಿ ನೀರು ಹರಿಸಲು ಶಿಫಾರಸು ಮಾಡಿತ್ತು.

ರಾಜ್ಯದ ಹಲವೆಡೆ ಪೂರ್ವ ಮುಂಗಾರು ಮಳೆಯಾಗುತ್ತಿದೆ. ಕೊಡಗಿನ ತ್ರಿವೇಣಿ ಸಂಗಮದಲ್ಲಿ ಮಳೆ ಹೆಚ್ಚಾಗಿದ್ದು, ಕಾವೇರಿ ಒಡಲಿಗೆ ಜೀವಕಳೆ ಬಂದಿದೆ.

**ತಮಿಳು ನಾಡು ವಾದ: ಕರ್ನಾಟಕದ ನಾಲ್ಕು ಜಲಾಶಯಗಳಲ್ಲಿ ಸಾಕಷ್ಟು ನೀರಿದೆ. ಕರ್ನಾಟಕದ ಅಗತ್ಯತೆಗಳಿಗೆ ಸದ್ಯ 4 ಟಿಎಂಸಿ ನೀರು ಸಾಕು. ಮುಖ್ಯ ಅಣೆಕಟ್ಟುಗಳಲ್ಲಿ 19.17 ಟಿಎಂಸಿ ನೀರಿದೆ. ಹೀಗಾಗಿ ಕರ್ನಾಟಕ ತಮಿಳು ನಾಡಿಗೆ ನೀರು ಹರಿಸಬೇಕು. ನೀರು ಬಿಡಲು ಅವರಿಗೆ ಯಾವುದೇ ತೊಂದರೆ ಇಲ್ಲ. ಈ ವರ್ಷ ಸಾಕಷ್ಟು ಮಳೆಯಾಗುವ ಮುನ್ಸೂಚನೆ ಸಿಕ್ಕಿದೆ. ಸದ್ಯಕ್ಕೆ ಆರು ಟಿಎಂಸಿ ನೀರನ್ನು ತಕ್ಷಣವೇ ಬಿಡಬೇಕು ಎಂದು ತಮಿಳು ನಾಡು ಸಿಡಬ್ಲ್ಯುಎಂಎ ಸಭೆಯಲ್ಲಿ ವಾದ ಮಂಡಿಸಿತ್ತು. ಕರ್ನಾಟಕದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಜಲಾಶಯಗಳಲ್ಲಿ ನೀರಿಲ್ಲದೆ ಬರಿದಾಗಿದ್ದು, ಕುಡಿಯುವ ನೀರಿಗೆ ನಮ್ಮಲ್ಲಿನ ನೀರು ಸಾಕಾಗುತ್ತಿಲ್ಲ.**




ಪರಿಣಾಮ ಕೆಆರ್‌ಎಸ್ ಅಣೆಕಟ್ಟು ಒಳ ಹರಿವು ಹೆಚ್ಚಾಗಿದೆ. ಕಳೆದೊಂದು ವಾರದಲ್ಲಿ 1 ಟಿಎಂಸಿಯಷ್ಟು ನೀರು ಕನ್ನಂಬಾಡಿ ಕಟ್ಟೆ ಸೇರಿದೆ. ಇದೀಗ ಮುಂಗಾರು ಪೂರ್ವದಲ್ಲಿ ಆದೇಶ ಹೊರಬಿದ್ದಿದೆ.

ತಮಿಳು ನಾಡು ವಾದ: ಕರ್ನಾಟಕದ ನಾಲ್ಕು ಜಲಾಶಯಗಳಲ್ಲಿ ಸಾಕಷ್ಟು ನೀರಿದೆ. ಕರ್ನಾಟಕದ ಅಗತ್ಯತೆಗಳಿಗೆ ಸದ್ಯ 4 ಟಿಎಂಸಿ ನೀರು ಸಾಕು. ಮುಖ್ಯ ಅಣೆಕಟ್ಟುಗಳಲ್ಲಿ 19.17 ಟಿಎಂಸಿ ನೀರಿದೆ. ಹೀಗಾಗಿ ಕರ್ನಾಟಕ ತಮಿಳು ನಾಡಿಗೆ ನೀರು ಹರಿಸಬೇಕು. ನೀರು ಬಿಡಲು ಅವರಿಗೆ ಯಾವುದೇ ತೊಂದರೆ ಇಲ್ಲ. ಈ ವರ್ಷ ಸಾಕಷ್ಟು ಮಳೆಯಾಗುವ ಮುನ್ಸೂಚನೆ ಸಿಕ್ಕಿದೆ. ಸದ್ಯಕ್ಕೆ ಆರು ಟಿಎಂಸಿ ನೀರನ್ನು ತಕ್ಷಣವೇ ಬಿಡಬೇಕು ಎಂದು ತಮಿಳು ನಾಡು ಸಿಡಬ್ಲ್ಯುಎಂಎ ಸಭೆಯಲ್ಲಿ ವಾದ ಮಂಡಿಸಿತ್ತು.

ಕರ್ನಾಟಕದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ.

ಜಲಾಶಯಗಳಲ್ಲಿ ನೀರಿಲ್ಲದೆ ಬರಿದಾಗಿದ್ದು, ಕುಡಿಯುವ ನೀರಿಗೆ ನಮ್ಮಲ್ಲಿನ ನೀರು ಸಾಕಾಗುತ್ತಿಲ್ಲ. ಇರುವ ನೀರನ್ನು ಸಂಪೂರ್ಣ ಬಳಸಿಕೊಳ್ಳಲು ಆಗುವುದಿಲ್ಲ, ಮುಂಗಾರು ಸಾಮಾನ್ಯವಾಗಿದ್ದರೆ ಮಾತ್ರ ನೀರು ಬಿಡಬಹುದು.

ಇಲ್ಲದಿದ್ದರೆ ನೀರು ಬಿಡುವುದಕ್ಕೆ ಸಾಧ್ಯವೆ ಇಲ್ಲ ಎಂದು ಸಿಡಬ್ಲ್ಯುಎಂಎ ಸಭೆಯಲ್ಲಿ ಕರ್ನಾಟಕ ವಾದ ಮಂಡಿಸಿದೆ.

# 11 ಕಡೆ ಎನ್‌ಐಎ ದಾಳಿ

**ನವದೆಹಲಿ: ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದ ತನಿಖೆ ತೀವ್ರಗೊಳಿಸಿರುವ ರಾಷ್ಟ್ರೀಯ ತನಿಖಾ ದಳ 4 ರಾಜ್ಯಗಳ 11 ಕಡೆ ರೇಡ್ ಮಾಡಿದೆ.**

ಬೆಂಗಳೂರಿನ ಕುಮಾರಸ್ವಾಮಿ ಲೇಔಟ್, ಬನಶಂಕರಿ ಸೇರಿ ಐದಕ್ಕೂ ಹೆಚ್ಚು ಕಡೆ ದಾಳಿ ನಡೆಸಿದೆ. ಮತೀನ್, ಶಾಝೀಬ್ ನಾಲ್ಕು ವರ್ಷ ತಲೆಮರೆಸಿಕೊಂಡಿದ್ದ ಅವಧಿಯಲ್ಲಿ ನೆರವು ನೀಡಿದವರಿಗಾಗಿ ಎನ್‌ಐಎ ಈ ಕಾರ್ಯಾಚರಣೆ ಮಾಡಿದೆ.

ತಮಿಳುನಾಡಿನ ಕೊಯಮತ್ತೂರಿನ ಖಾಸಗಿ ಆಸ್ಪತ್ರೆಯೊಂದರ ಮೇಲೆ ರೇಡ್ ಮಾಡಿದ ಎನ್‌ಐಎ, ಕೆಫೆ ಸ್ಫೋಟ ಪ್ರಕರಣದಲ್ಲಿ ಭಾಗಿಯಾದ ಶಂಕೆ ಮೇರೆಗೆ ಕರ್ನಾಟಕ ಮೂಲದ ಇಬ್ಬರು ವೈದ್ಯರನ್ನು ವಶಕ್ಕೆ ಪಡೆದಿದೆ. ಈ ಇಬ್ಬರು ಪಾತಕಿಗಳಿಗೆ ಹಣಕಾಸು ನೆರವು ನೀಡಿರುವ ಶಂಕೆ ವ್ಯಕ್ತವಾಗಿದೆ.

ಮತ್ತೊಂದು ಕಡೆ ಆಂಧ್ರದ ರಾಯದುರ್ಗದಲ್ಲಿ ನಿವೃತ್ತ ಶಿಕ್ಷಕ ಅಬ್ದುಲ್ ಮನೆ ಮೇಲೆಯೂ ಎನ್‌ಐಎ ದಾಳಿ ನಡೆಸಿ, ಅವರ ಪುತ್ರ ಸೊಹೇಲ್‌ನನ್ನು ವಶಕ್ಕೆ ಪಡೆದಿದೆ. ಈತ ಬೆಂಗಳೂರಲ್ಲಿ ಟೆಕ್ಕಿಯಾಗಿ ಕೆಲಸ ಮಾಡುತ್ತಿದ್ದ.

ಸೊಹೇಲ್ ಬ್ಯಾಂಕ್ ಖಾತೆಗೆ ದಿಢೀರ್ ಎಂದು ಭಾರೀ ಮೊತ್ತದ ಹಣ ಜಮೆಯಾಗಿದ್ದ ಬಗ್ಗೆ ಅವರ ಕುಟುಂಬಸ್ಥರನ್ನು ಎನ್‌ಐಎ ಪ್ರಶ್ನಿಸಿದೆ. ತೆಲಂಗಾಣದಲ್ಲಿಯೂ ಎನ್‌ಐಎ ರೇಡ್ ಮಾಡಿದೆ.



ಮಂಗಳವಾರ ವಿಧಾನಸೌಧದಲ್ಲಿ ಮಾಜಿ ಪ್ರಧಾನಿ ಹುತಾತ್ಮ ರಾಜೀವ್ ಗಾಂಧಿ ಅವರ ಪುಣ್ಯಸ್ಮರಣೆಯ ಭಾಗವಾಗಿ ಆಚರಿಸುವ "ಭಯೋತ್ಪಾದನಾ ವಿರೋಧಿ ದಿನದ" ಅಂಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಭಯೋತ್ಪಾದನಾ ವಿರೋಧಿ ಪ್ರತಿಜ್ಞಾ ವಚನ ಬೋಧಿಸಿದರು. ವಿಧಾನಸೌಧದ ಸಮ್ಮೇಳನಾ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಉಪಸ್ಥಿತರಿದ್ದರು.

# ದ್ವಿತೀಯ ಪಿಯುಸಿ-2 ಫಲಿತಾಂಶ ಪ್ರಕಟ

ವಿಶ್ವವಾರಿಧಿ । ಬೆಂಗಳೂರು

2023–24ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ –2ರ ಫಲಿತಾಂಶವನ್ನು ವೆಬ್ ಸೈಟ್ ಮೂಲಕ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ ಪ್ರಕಟಿಸಿದ್ದು, ಶೇ.35.25 ರಷ್ಟು ವಿದ್ಯಾರ್ಥಿಗಳು ಪಾಸ್ ಆಗಿದ್ದಾರೆ. ಪರೀಕ್ಷೆ ಎರಡರಲ್ಲಿಯೂ ವಿದ್ಯಾರ್ಥಿನಿಯರೇ ಮುಂದಿದ್ದಾರೆ. https://karresults.nic.in ವೆಬ್‌ಸೈಟ್‌ನಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಫಲಿತಾಂಶ ವೀಕ್ಷಿಸಬಹುದಾಗಿದೆ.

ಏಪ್ರಿಲ್ 29 ರಿಂದ ಮೇ 16 ರವರೆಗೆ ನಡೆದ ದ್ವಿತೀಯ ಪಿಯುಸಿ ಪರೀಕ್ಷೆ–2 ರ ಫಲಿತಾಂಶವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ ಅಧ್ಯಕ್ಷೆ ಮಂಜುಶ್ರೀ ವೆಬ್ ಸೈಟ್ ಮೂಲಕ ಪ್ರಕಟಿಸಿದ್ದಾರೆ.

ಪರೀಕ್ಷೆ –2 ರಾಜ್ಯದ 301 ಕೇಂದ್ರಗಳಲ್ಲಿ ನಡೆದಿದ್ದು, ಮೇ 15 ರಿಂದ 18 ರವರೆಗೆ 28 ಕೇಂದ್ರಗಳಲ್ಲಿ 7875 ಮೌಲ್ಯಮಾಪಕರು ಉತ್ತರ ಪತ್ರಿಕೆಗಳ ಮೌಲ್ಯಮಾಪನ ನಡೆಸಲಾಗಿದೆ. ಪರೀಕ್ಷೆ–2 ರಲ್ಲಿ ಶೇ.35.25 ರಷ್ಟು ಫಲಿತಾಂಶ ಬಂದಿದೆ ಎಂದು ತಿಳಿಸಿದ್ದಾರೆ.

# ಹೆಚ್‌ಎಸ್‌ಆರ್‌ಪಿಗೆ ಮತ್ತೆ ವಿನಾಯ್ತಿ

ಬೆಂಗಳೂರು: ಹೈ ಸೆಕ್ಯೂರೆಟಿ ರಿಜಿಸ್ಟ್ರೇಷನ್ ಪ್ಲೇಟ್(ಹೆಚ್‌ಎಸ್‌ಆರ್‌ಪಿ) ನಂಬರ್ ಫಲಕ ಅಳವಡಿಸದ ವಾಹನ ಸವಾರರ ವಿರುದ್ಧ ಜೂನ್ 12ರವರೆಗೂ ಯಾವುದೇ ಕಠಿಣ ಕ್ರಮ ಕೈಗೊಳ್ಳುವುದಿಲ್ಲ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ. ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಸಿದ್ಧಪಡಿಸುವ ಕಂಪೆನಿಗಳಲ್ಲಿ ಒಂದಾದ ಬಿಎನ್‌ಡಿ ಎನರ್ಜಿ ಲಿಮಿಟೆಡ್ ನಂಬರ್ ಫಲಕ ಅಳವಡಿಸಲು ವಿಧಿಸಿರುವ ದಿನಾಂಕವನ್ನು ಮೇ 31ರವರೆಗೆ ವಿಸ್ತರಿಸಬೇಕು ಎಂದು ಕೋರಿ ಮಧ್ಯಂತರ ಅರ್ಜಿ ಸಲ್ಲಿಸಿದ್ದರು.

ನ್ಯಾಯಮೂರ್ತಿ ಎಂಜಿಎಸ್ ಕಮಲ್ ಅವರಿದ್ದ ರಜಾಕಾಲದ ನ್ಯಾಯಪೀಠ ಅರ್ಜಿಯ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಸರ್ಕಾರದ ಪರವಾಗಿ ಹಾಜರಾಗಿದ್ದ ಹೆಚ್ಚುವರಿ ಅಡ್ವೋಕೇಟ್ ಜನರಲ್ ರೋಬಿನ್ ಜೇಕಬ್, ಅರ್ಜಿ ವಿಚಾರಣೆ ಜೂನ್ 11ರಂದು ಪಟ್ಟಿಯಾಗಿದೆ. ಹೀಗಾಗಿ ಈ ಸಂಬಂಧ ಯಾವುದೇ ಆದೇಶ ಹೊರಡಿಸಬಾರದು ಎಂದು ಮನವಿ ಮಾಡಿದರು. ಈ ವೇಳೆ ನ್ಯಾಯಪೀಠ, ಅಲ್ಲಿಯವರೆಗೂ ಕಾಲಾವಕಾಶ ನೀಡಬಹುದೇ ಎಂದು ಪ್ರಶ್ನಿಸಿದರು. ಇದಕ್ಕೆ ಸರ್ಕಾರಿ ವಕೀಲರು, ಜೂನ್ 12ರವರೆಗೆ ಯಾವುದೇ ಕ್ರಮ ಕೈಗೊಳ್ಳಲಾಗುವುದಿಲ್ಲ ಎಂದು ಭರವಸೆ ನೀಡಿದರು. ಈ ಅಂಶ ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು ಮುಂದೂಡಿತು.

ಪ್ರಕರಣದ ಹಿನ್ನೆಲೆ: ಹಳೆಯ ವಾಹನಗಳಿಗೆ (2019ಕ್ಕೂ ಮುನ್ನ ನೋಂದಣಿಯಾಗಿರುವ) ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸುವ ಕುರಿತಂತೆ ಇರುವ ಗೊಂದಲಗಳಿಗೆ ಈವರೆಗೂ ಪರಿಹಾರ ಸಿಕ್ಕಿಲ್ಲ. ಅಲ್ಲದೆ, ಅಂತರ್ಜಾಲದ ಕುರಿತು ಜ್ಞಾನವಿಲ್ಲದವರಿಗೆ ಈವರೆಗೂ ಗೊಂದಲ ನಿವಾರಣೆಯಾಗಿಲ್ಲ. ಆದರೆ, ಮೇ ತಿಂಗಳ ಅಂತ್ಯದ ವೇಳೆಗೆ ಎಲ್ಲ ವಾಹನಗಳಿಗೂ ಹೆಚ್‌ಎಸ್‌ಆರ್‌ಪಿ ನಂಬರ್ ಅಳವಡಿಸುವುದು ಕಡ್ಡಾಯವಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಹೊರಡಿಸಿರುವ ಆದೇಶದಲ್ಲಿ ಅಂತಿಮ ದಿನಾಂಕ ಪ್ರಸ್ತಾಪಿಸಿಲ್ಲ. ಆದರೆ, ರಾಜ್ಯ ಸರ್ಕಾರ ಗಡುವು ವಿಧಿಸಿದೆ. ಅದಕ್ಕೆ ಅವಕಾಶವಿಲ್ಲ ಎಂದು ಗೌರಿಶಂಕರ್ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಅಲ್ಲದೆ, ಹೆಚ್‌ಎಸ್‌ಆರ್‌ಪಿ ನಂಬರ್ ಫಲಕ ತಯಾರಿಕೆ ಸಂಬಂಧ ಟೆಂಡರ್ ಪ್ರಕ್ರಿಯೆಯನ್ನು ಪ್ರಶ್ನಿಸಿ ವಿವಿಧ ಕಂಪೆನಿಗಳು ಹೈಕೋರ್ಟ್ ಮೊರೆ ಹೋಗಿದ್ದವು.

# ಪ್ರಜ್ವಲ್ ಪಾಸ್‌ಪೋರ್ಟ್ ರದ್ದು ಮಾಡಲು ಪತ್ರ

ಬೆಂಗಳೂರು: ನೂರಾರು ಮಹಿಳೆಯರ ಜೊತೆಗಿನ ರಾಸಲೀಲೆ ವಿಡಿಯೋಗಳು ಬಹಿರಂಗಗೊಂಡ ನಂತರ ವಿದೇಶಕ್ಕೆ ಪರಾರಿಯಾಗಿರುವ ಹಾಸನ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಅವರ ರಾಜತಾಂತ್ರಿಕ ಪಾಸ್ ಪೋರ್ಟ್ ರದ್ದು ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರು ಇಂದು ಮಂಗಳವಾರ ತಿಳಿಸಿದ್ದಾರೆ.

ಇಂದು ನಗರದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಗೃಹ




ಸಚಿವರು, ಪ್ರಜ್ವಲ್ ರೇವಣ್ಣ ಬಂಧನಕ್ಕೆ ಈಗಾಗಲೆ ವಾರಂಟ್ ಜಾರಿ ಆಗಿದೆ. ಅದರ ಆಧಾರದ ಮೇಲೆ ರಾಜತಾಂತ್ರಿಕ ಪಾಸ್ ಪೋರ್ಟ್ ರದ್ದು ಕೋರಿ ಪತ್ರ ಬರೆಯಲಾಗಿದೆ. ಪಾಸ್‌ಪೋರ್ಟ್ ರದ್ದು ಮಾಡಿದರೆ ಪ್ರಜ್ವಲ್ ಭಾರತಕ್ಕೆ ಬರಬೇಕಾಗುತ್ತದೆ ಎಂದರು.

ಇದೇ ವೇಳೆ, ಎಸ್‌ಐಟಿ ಮುಂದೆ ಶರಣಾಗುವಂತೆ ಪ್ರಜ್ವಲ್ ರೇವಣ್ಣ ಅವರಿಗೆ ಮಾಜಿ ಮುಖ್ಯಮಂತ್ರಿ ಎಚ್ ಡಿ ಕುಮಾರಸ್ವಾಮಿ ಮನವಿ ಮಾಡಿರುವ ಬಗ್ಗೆ ಪ್ರತಿಕ್ರಿಯಿಸಿದ ಪರಮೇಶ್ವರ ಅವರು, ಇದು ಅವರ ಕುಟುಂಬದ ಆಂತರಿಕ ವಿಚಾರ ಎಂದರು. ಇನ್ನು ಫೋನ್ ಟ್ಯಾಪ್ ಆಗುತ್ತಿದೆ ಎಂಬ ಮಾಜಿ ಸಿಎಂ ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಸರ್ಕಾರದ ವತಿಯಿಂದ ಯಾರ ಫೋನ್ ಸಹ ಟ್ಯಾಪ್ ಮಾಡಿಲ್ಲ. ಒಂದು ವೇಳೆ ಫೋನ್ ಟ್ಯಾಪ್ ಆಗಿದ್ದರೆ ದಾಖಲೆ ಕೊಡಲಿ. ತನಿಖೆ ಮಾಡುತ್ತೇವೆ ಎಂದರು. ವಕೀಲ ದೇವರಾಜೇಗೌಡ ಆಡಿಯೋ ಬಗ್ಗೆ ಎಸ್‌ಐಟಿ ನೋಡಿಕೊಳ್ಳುತ್ತೆ. ಪ್ರತಿಯೊಂದು ಹಂತದಲ್ಲಿ ತನಿಖೆ ಮಾಡಲು ನಾವು ಹೇಳಲ್ಲ. ತನಿಖೆ ಮಾಡಲು ಎಸ್‌ಐಟಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದೇವೆ ಎಂದು ಹೇಳಿದರು.

ಎಚ್.ಡಿ ದೇವೇಗೌಡರ ಕುಟುಂಬ ಮುಗಿಸಲು ಷಡ್ಯಂತ್ರ ನಡೆಸಲಾಗಿದೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಗೃಹ ಸಚಿವರು, ಎಚ್ ಡಿ ಕುಮಾರಸ್ವಾಮಿ ಅವರು ಯಾವ ಉದ್ದೇಶದಿಂದ ಹೇಳಿದ್ದಾರೆ ಗೊತ್ತಿಲ್ಲ. ಕಾಂಗ್ರೆಸ್ ಸರ್ಕಾರಕ್ಕೆ ಬಹಳ ಕೆಲಸ ಇದೆ. ಆಡಳಿತ ಮಾಡಬೇಕು.

ಇಡೀ ದೇಶ ನಮ್ಮ ಕಾಂಗ್ರೆಸ್ ಸರ್ಕಾರದ ಕಡೆ ನೋಡುತ್ತಿದೆ ಎಂದರು. ಇನ್ನು ಬೆಂಗಳೂರಿನ ಜಿ.ಆರ್.ಫಾರ್ಮ್‌ಹೌಸ್‌ನಲ್ಲಿ ನಡೆದಿದ್ದ ರೇವ್ ಪಾರ್ಟಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಬಿ ಪೊಲೀಸರ ದಾಳಿ ನಡೆಸಿದ ವೇಳೆ ಡ್ರಗ್ಸ್, ಸಿಂಥೆಟಿಕ್ ಡ್ರಗ್ಸ್ ಪತ್ತೆ ಆಗಿದೆ.

ಪೊಲೀಸರು ಪಾರ್ಟಿಯಲ್ಲಿ ಭಾಗಿಯಾದವರ ಮಾಹಿತಿ ಪಡೆದಿದ್ದಾರೆ. ಡ್ರಗ್ಸ್ ಫ್ರೀ ರಾಜ್ಯ ಮಾಡಬೇಕು ಅಂತ ಕ್ರಮ ಕೈಗೊಳ್ಳುತ್ತಿದ್ದೇವೆ.

ಗಾಂಜಾ ಎಲ್ಲಿಂದ ಬರುತ್ತೆ ಎಂಬ ಮಾಹಿತಿ ಮೇಲೆ ಆರೋಪಿಗಳನ್ನು ಹಿಡಿಯುತ್ತೇವೆ. ಪೆಡ್ಲರ್ಸ್ ಯಾರಿದ್ದಾರೆ ಅವರನ್ನು ಹಿಡಿಯವುದು ಬಹಳ ಮುಖ್ಯ. ರೇವ್ ಪಾರ್ಟಿ ಹತ್ತಿಕ್ಕುವ ಕೆಲಸ ಮಾಡುತ್ತೇವೆ ಎಂದು ಭರವಸೆ ನೀಡಿದರು.


ಮುಂಜಾನೆ ವಾರ್ತೆ ಕನ್ನಡ ದಿನಪತ್ರಿಕೆ ಓದುವುದು ಈಗ ಮತ್ತಷ್ಟು ಸುಲಭ

ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತು ಮುಂಜಾನೆವಾರ್ತೆ ಓದಿ...

www.munjaneevartheepaper.com

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ–ಪೇಪರ್: www.munjaneevartheepaper.com
22 WEDNESDAY MAY 2024
22 ಬುಧವಾರ ಮೇ 2024

# ಜಿಪ್‌ಲೈನ್ ತುಂಡರಿಸಿ ಮಹಿಳೆ ಸಾವು

ಕನಕಪುರ: ಹಾರೋಹಳ್ಳಿ ತಾಲ್ಲೂಕಿನ ಬೆಟ್ಟಹಳ್ಳಿ ಗ್ರಾಮದ ಜಂಗಲ್ ಟ್ರಯಲ್ಸ್ ರೆಸಾರ್ಟ್‌ನಲ್ಲಿ ಮೇ 19 ರಂದು ಬೆಳಗ್ಗೆ ಜಿಪ್‌ಲೈನ್ ಆಡುವಾಗ ತಂತಿ ತುಂಡರಿಸಿದ ಕಾರಣ 20 ಅಡಿ ಎತ್ತರಿಂದ ಬಿದ್ದು ಮಹಿಳೆಯೊಬ್ಬರು ಸಾವಿಗೀಡಾಗಿದ್ದಾರೆ. ಘಟನೆಯಲ್ಲಿ ಇಬ್ಬರು ಗಾಯಗೊಂಡಿದ್ದಾರೆ.

ಆನೇಕಲ್ ತಾಲ್ಲೂಕಿನ ಅತ್ತಿಬೆಲೆಯ ರಂಜನಿ (35) ಮೃತ ಮಹಿಳೆ. ಅವರಿಗೆ ಪತಿ ಮತ್ತು ಇಬ್ಬರು ಮಕ್ಕಳಿದ್ದಾರೆ. ಬೆಂಗಳೂರಿನ ಜೆ.ಪಿ. ನಗರದ ಮಿಲನ ನರ್ಸಿಂಗ್ ಹೋಂನಲ್ಲಿ ಅವರು ಕೆಲಸ ಮಾಡುತ್ತಿದ್ದರು. ರೆಸಾರ್ಟ್ ವ್ಯವಸ್ಥಾಪಕ ಕನಕಪುರದ ಪುಟ್ಟಮಾದು ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಭಾನುವಾರದ ರಜೆ ಕಳೆಯಲು ರಂಜನಿ ತಮ್ಮ 18 ಸಹೋದ್ಯೋಗಿಗಳೊಂದಿಗೆ ಜಂಗಲ್ ಟ್ರಯಲ್ಸ್ ರೆಸಾರ್ಟ್‌ಗೆ ಬಂದಿದ್ದರು.

ರೆಸಾರ್ಟ್‌ನಲ್ಲಿ ಜಿಪ್‌ಲೈನ್ ಆಡುವಾಗ ತಂತಿ ತುಂಡರಿಸಿ ಕೆಳಗೆ ಬಿದ್ದಿದ್ದಾರೆ. ತಕ್ಷಣ ಸ್ನೇಹಿತರು ಅವರನ್ನು ದಯಾನಂದ ಸಾಗರ ಆಸ್ಪತ್ರೆಗೆ ಸಾಗಿಸಿದರು. ಅಲ್ಲಿ ಅವರು ಕೊನೆಯುಸಿರೆಳೆದಿದ್ದಾರೆ.

ರೆಸಾರ್ಟ್ ಮಾಲೀಕರು ಸುರಕ್ಷಾ ನಿಯಮ ಪಾಲಿಸಿಲ್ಲ. ಅಜಾಗರೂಕತೆ, ನಿರ್ಲಕ್ಷ್ಯ ವಹಿಸಿದ್ದಾರೆ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆರೋಪಿಸಿ ರಂಜನಿ ಅವರ ಸ್ನೇಹಿತೆ ನಿರ್ಮಲಾ ಹಾರೋಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈ ಹಿಂದೆಯೂ ರೆಸಾರ್ಟ್‌ಗೆ ಬಂದ ಹಲವರು ಜಿಪ್‌ಲೈನ್ ಹಗ್ಗ ಸರಿಯಿಲ್ಲವೆಂದು ದೂರಿದ್ದರು ಎಂದು ತಿಳಿದುಬಂದಿದ್ದು ಹಾರೋಹಳ್ಳಿ ಪೊಲೀಸರು ತನಿಖೆ ಕೈಗೊಂಡಿದ್ದು ಪರಿಶೀಲನೆ ನಡೆಸುತ್ತಿದ್ದಾರೆ.

# ಕೈಮಗ್ಗ ನೇಕಾರರಿಂದ ಅರ್ಜಿ ಆಹ್ವಾನ

ಚಿಕ್ಕಬಳ್ಳಾಪುರ: 2024–25ನೇ ಸಾಲಿಗೆ ಕೈಮಗ್ಗ ನೇಕಾರರನ್ನು ಪ್ರಧಾನಮಂತ್ರಿ ಜೀವನ್ ಜ್ಯೋತಿ ಭೀಮಾ ಯೋಜನೆ ಮತ್ತು ಪ್ರಧಾನಮಂತ್ರಿ ಸುರಕ್ಷಾ ಭೀಮಾ ಯೋಜನೆಗಳಡಿ ನೋಂದಾಯಿಸಿಕೊಳ್ಳಲು ಜಿಲ್ಲೆಯ ಕೈಮಗ್ಗ ನೇಕಾರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರಧಾನಮಂತ್ರಿ ಜೀವನ್ ಜ್ಯೋತಿ ಭೀಮಾ ಯೋಜನೆಗೆ (ಪಿ.ಎಂ.ಜೆ.ಜೆ.ಬಿ.ವೈ) 18 ರಿಂದ 50ರ ವಯೋಮಾನದ ಕೈಮಗ್ಗ ನೇಕಾರರು ನೋಂದಾಯಿಸಲು ಅರ್ಹರಾಗಿರುತ್ತಾರೆ. ವಿಮೆಯ ಪ್ರೀಮಿಯಂ ಮೊತ್ತ 436 ರೂ. ಇದ್ದು ಸಂಪೂರ್ಣ ಪ್ರೀಮಿಯಂ ಮೊತ್ತವನ್ನು ಮರುಸಂದಾಯ ಆಧಾರದ ಮೇಲೆ ಸರ್ಕಾರದಿಂದ ಕೈಮಗ್ಗ ನೇಕಾರರಿಗೆ ಮರುಪಾವತಿಸಲಾಗುತ್ತದೆ. ಬ್ಯಾಂಕ್ ಖಾತೆಯಿಂದ 2024–25ನೇ ಸಾಲಿಗೆ 436 ರೂ. ಗಳ ಪ್ರೀಮಿಯಂ ಮೊತ್ತವನ್ನು ಪಾವತಿಸಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಕಚೇರಿಯನ್ನು ಸಂಪರ್ಕಿಸಿ ನಿಗದಿತ ನಮೂನೆ ಅನೆಕ್ಷರ್ ಎಫ್.1 ಅನ್ನು ಪಡೆದು ಆಧಾರ್ ಲಿಂಕ್ ಆಗಿರುವ ಬ್ಯಾಂಕ್ ಖಾತೆಗೆ ಸಂಬಂಧಿಸಿದಂತೆ ಬ್ಯಾಂಕಿನ ಶಾಖಾ ವ್ಯವಸ್ಥಾಪಕರಿಂದ ಮ್ಯಾಂಡೇಟ್ ಫಾರಂ (Mandate Form) ಪಡೆದು ಅನೆಕ್ಷರ್ ಎಫ್.1 ನೊಂದಿಗೆ ಜೂನ್ 10 ರೊಳಗೆ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಕಚೇರಿಗೆ ಸಲ್ಲಿಸಬೇಕು.

ಈಗಾಗಲೇ 2023–24ನೇ ಸಾಲಿನಲ್ಲಿ ಪಿ.ಎಂ.ಜೆ.ಜೆ.ಬಿ.ವೈ ಯೋಜನೆಯಡಿ ನೋಂದಾಯಿಸಿರುವ ಕೈಮಗ್ಗ ನೇಕಾರರು 2024–25ನೇ ಸಾಲಿಗೆ ಬ್ಯಾಂಕ್ ಖಾತೆಯಿಂದ 436 ರೂ. ಗಳ ಪ್ರೀಮಿಯಂ ಮೊತ್ತವನ್ನು ಪಾವತಿಸಿ ಪಾಲಿಸಿಯನ್ನು ನವೀಕರಿಸಿ ಬ್ಯಾಂಕ್ ಖಾತೆಯಿಂದ ಕಡಿತವಾಗಿರುವ ಸ್ಟೇಟ್‌ಮೆಂಟ್ / ಬ್ಯಾಂಕ್ ಪಾಸ್ ಪುಸ್ತಕದ ಧೃಡೀಕೃತ ಪ್ರತಿಯನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಕಚೇರಿಗೆ ಜೂನ್ 10 ರೊಳಗೆ ಸಲ್ಲಿಸಬೇಕು.

ಪ್ರಧಾನಮಂತ್ರಿ ಸುರಕ್ಷಾ ಭೀಮಾ (ಪಿ.ಎಂ.ಎಸ್.ಬಿ.ವೈ) ಯೋಜನೆಗೆ ನೋಂದಾಯಿಸಲು 18–70 ರ ವಯೋಮಾನದ ಕೈಮಗ್ಗ ನೇಕಾರರು ಅರ್ಹತೆ ಹೊಂದಿರುತ್ತಾರೆ. ಈ ಯೋಜನೆಗೆ ಒಳಪಡಲು ವಿಮೆಯ ಪ್ರೀಮಿಯಂ ಮೊತ್ತ 20 ರೂ. ಇದ್ದು ಸಂಪೂರ್ಣ ಪ್ರೀಮಿಯಂ ಮೊತ್ತವನ್ನು ಮರುಸಂದಾಯ ಆಧಾರದ ಮೇಲೆ ಸರ್ಕಾರದಿಂದ ಕೈಮಗ್ಗ ನೇಕಾರರಿಗೆ ಮರುಪಾವತಿಸಲಾಗುತ್ತದೆ. ಯೋಜನೆಗೆ ಬ್ಯಾಂಕ್ ಖಾತೆಯಿಂದ 2024–25ನೇ ಸಾಲಿಗೆ 20 ರೂ ಗಳ ಪ್ರೀಮಿಯಂ ಮೊತ್ತ ಪಾವತಿಸಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಕಚೇರಿಯನ್ನು ಸಂಪರ್ಕಿಸಿ ನಿಗದಿತ ನಮೂನೆ ಅನೇಕ್ಷರ್ ಎಫ್–1 ಅನ್ನು ಪಡೆದು ಆಧಾರ್ ಲಿಂಕ್ ಆಗಿರುವ ಬ್ಯಾಂಕ್ ಖಾತೆಗೆ ಸಂಬಂಧಿಸಿದಂತೆ ಬ್ಯಾಂಕಿನ ಶಾಖಾ ವ್ಯವಸ್ಥಾಪಕರಿಂದ ಮ್ಯಾಂಡೇಟ್ ಫಾರಂ (ಒಚಿಟಿಜಚಿಣಜ ಈಂಡಿಟ) ಪಡೆದು ಅನೇಕ್ಷರ್ ಎಫ್.1 ನೊಂದಿಗೆ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಕಚೇರಿಗೆ ಜೂನ್ 10 ರೊಳಗೆ ಸಲ್ಲಿಸಬೇಕು.

ಈಗಾಗಲೇ 2023–24ನೇ ಸಾಲಿನಲ್ಲಿ ಪಿ.ಎಂ.ಜೆ.ಜೆ.ಬಿ.ವೈ ಯೋಜನೆಯಡಿ ನೋಂದಾಯಿಸಿರುವ ಕೈಮಗ್ಗ ನೇಕಾರರು 2024–25ನೇ ಸಾಲಿಗೆ ಬ್ಯಾಂಕ್ ಖಾತೆಯಿಂದ 20 ರೂ. ಗಳ ಪ್ರೀಮಿಯಂ ಮೊತ್ತ ಪಾವತಿಸಿ ಪಾಲಿಸಿಯನ್ನು ನವೀಕರಿಸಿ ಬ್ಯಾಂಕ್ ಖಾತೆಯಿಂದ ಕಡಿತವಾಗಿರುವ ಸ್ಟೇಟ್‌ಮೆಂಟ್ / ಬ್ಯಾಂಕ್ ಪಾಸ್ ಪುಸ್ತಕದ ಧೃಡೀಕೃತ ಪ್ರತಿಯನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಕಚೇರಿಗೆ ಜೂನ್ 10 ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು

# ಪೈಪ್ ಲಾರಿಗಳನ್ನು ತಡೆದು ದಿಢೀರ್ ಪ್ರತಿಭಟನೆ

ಗುಬ್ಬಿ: ಹೇಮಾವತಿ ನೀರು ಮಾಗಡಿಗೆ ಹರಿಸುವ ಲಿಂಕ್‌ಕೆನಾಲ್ ಪೈಪ್ ಲೈನ್‌ಕಾಮಗಾರಿಗೆ ಸಾವಿರಾರುರೈತರು ಹೋರಾಟ ನಡೆಸಿ ಕೆಲಸ ನಿಲ್ಲಿಸಲು ಸೂಚಿಸಿದ್ದರೂ ಮೂರು ದಿನದ ಬಳಿಕ ಬೃಹತ್‌ಗಾತ್ರದ 12 ಅಡಿ ವ್ಯಾಸದ ಪೈಪ್ ಗಳನ್ನು ಲಾರಿಗಳ ಮೂಲಕ ತಂದು ಕೆಲಸ ಪುನರಾರಂಭ ಮಾಡುವ ಮುನ್ಸೂಚನೆ ಕಂಡ ರೈತರು ತಕ್ಷಣ ಶಾಸಕ ಎಂ.ಟಿ.ಕೃಷ್ಣಪ್ಪ ಹಾಗೂ ಮಾಜಿ ಸಚಿವ ಸೊಗಡು ಶಿವಣ್ಣ ಅವರ ನೇತೃತ್ವದಲ್ಲಿ ದಿಢೀರ್ ಪ್ರತಿಭಟನೆ ನಡೆಸಿದರು.

ತಾಲ್ಲೂಕಿನ ಸಿ.ಎಸ್.ಪುರ ಹೋಬಳಿ ಹೊಸಹಳ್ಳಿ ಕ್ರಾಸ್ ಬಳಿ ದೊಡ್ಡ ಪೈಪ್ ಹೊತ್ತ 25 ಲಾರಿಗಳು ಪ್ರತ್ಯಕ್ಷವಾಗಿರುವುದುಕಂಡ ಸ್ಥಳೀಯ ರೈತರು ಶಾಸಕರಿಗೆ ಮಾಹಿತಿ ತಿಳಿಸಿ ಕೂಡಲೇ ನೂರಾರು ಮಂದಿ ಜಮಾಯಿಸಿ ಹೆಬ್ಬೂರುರಸ್ತೆಯಲ್ಲಿ ಕುಳಿತು ಕೆಲ ಕಾಲ ಪತಿಭಟನೆ ನಡೆಸಿ, ಲಾರಿಗಳನ್ನು ತಡೆದು ಮರಳಿ ವಾಪಸ್ ಹೋಗಲು ತಾಕೀತು ಮಾಡಿದರು.

ಪ್ರತಿಭಟನಾ ನಿರತರನ್ನು ಕುರಿತು ಶಾಸಕ ಎಂ.ಟಿ.ಕೃಷ್ಣಪ್ಪ ಮಾತನಾಡಿ ಯಾವುದೇ ರೀತಿ ರೈತರಿಗೆ ನೋಟಿಸ್ ನೀಡದೆ ಭೂ ವಶಕ್ಕೆ ಪ್ರಕ್ರಿಯೆ ನಡೆಸದೆ ಏಕಾಏಕಿ ಕಾಮಗಾರಿ ಮಾಡಿರುವುದೇ ಇಂಜಿನಿಯರ್‌ಗಳ ಕಮಿಷನ್ ಆಟವಾಗಿದೆ. ಕಂದಾಯ ಇಲಾಖೆಯಿ ನುಮತಿ ಸಿಗದೇ ಕೆಲಸ ಆರಂಭಿಸಿರುವ ಅಧಿಕಾರಿಗಳು ಸರ್ಕಾರದ ಕೈ ಗೊಂಬೆಯಾಗಿದ್ದಾರೆ. ಈ ಕೆಲಸ ನಿಲ್ಲಿಸಲು ಗೃಹ ಸಚಿವರು ಹೇಳಿದ್ದರೂ ಕಿಂಚಿತ್ತೂ ಬೆಲೆ ಸಿಗದ ಈ ಸಮಯದಲ್ಲಿ ಪ್ರತಿಭಟನೆ ಅನಿವಾರ್ಯ. ಈ ಹಿಂದೆ ನಡೆದ ಬೃಹತ್ ಪ್ರತಿಭಟನೆಯಲ್ಲಿ ಸಾವಿರಾರು ರೈತರ ಮುಂದೆ ಜೂ. 5 ರವರೆಗೆ ಕಾಮಗಾರಿ ಮಾಡದಂತೆ ಸೂಚಿಸಿದ್ದರೂ ಕೆಲಸ ಪುನರಾರಂಭ ಮಾಡುವ ಈ ಅಧಿಕಾರಿಗಳನ್ನು ರೈತರು ಮರಕ್ಕೆ ಕಟ್ಟಿ ಹಾಕುತ್ತಾರೆ. ಕುಣಿಗಲ್ ತಾಲ್ಲೂಕಿಗೆ ನೀರು ಆಧುನೀಕರಣಗೊಂಡ ನಾಲೆಯಲ್ಲಿ 680 ಕ್ಯೂಸೆಕ್ ನೀರು ಹೋಗಲಿ. ಅವೈಜ್ಞಾನಿಕ ಕಾಮಗಾರಿ ಎಂದು ಹೇಳುವ ಇಂಜಿನಿಯರ್‌ಗಳು ಕೂಡಲೇ ಲಾರಿಗಳನ್ನು ವಾಪಸ್ ಕಳುಹಿಸಿ ಕೆಲಸ ನಿಲ್ಲಿಸಬೇಕು. ಇಲ್ಲವಾದಲ್ಲಿ ಮುಂದಿನ ಅನಾಹುತಕ್ಕೆ ನೀವೇ ಜವಾಬ್ದಾರರು ಎಂದು ಎಚ್ಚರಿಸಿದರು.



ಕಾನೂನು ಕೈಗೆತ್ತಿಕೊಳ್ಳಲು ಅಧಿಕಾರಿಗಳೇ ಪ್ರಚೋದನೆ ನೀಡುತ್ತಿದ್ದಾರೆ. ಕೆಲಸ ನಿಲ್ಲಿಸಲುಒಪ್ಪಿ ಮೂರೇ ದಿನದಲ್ಲಿ ಕೆಲಸಕ್ಕೆ ದೊಡ್ಡ ಪೈಪ್ ತರಿಸಿರುವ ಇಂಜಿನಿಯರ್‌ಇಲ್ಲಿಗೆ ಬಂದ್ರೆ ಜನ ಗ್ರಹಚಾರ ಬಿಡಿಸುತ್ತಾರೆ. ಆಗ ನಡೆಯುವ ಅನಾಹುತಕ್ಕೆ ಸರ್ಕಾರ ನೇರ ಹೊಣೆ. ಕುಣಿಗಲ್, ಮಾಗಡಿಜನರು ನಮ್ಮವರೇ. ಆದರೆ ಮುಖ್ಯ ನಾಲೆಯ ಮೂಲಕ ನೀರು ತೆಗೆದುಕೊಂಡು ಹೋಗಲಿ. ಇಲ್ಲವಾದಲ್ಲಿ ನಾಗಮಂಗಲ ಮೂಲಕ ಕಾವೇರಿ ಪಡೆಯಲಿ, ಎತ್ತಿನಹೊಳೆ ನೀರು ಪಡೆಯಲಿ ಅದು ಬಿಟ್ಟು ರೈತರನ್ನು ಹಾಳು ಮಾಡುವ ಈ ವಾಮಮಾರ್ಗ ಬೇಕಿರಲಿಲ್ಲ. ಈ ಯೋಜನೆ ಅವೈಜ್ಞಾನಿಕ ಎಂಬುದನ್ನು ಸರ್ಕಾರಕ್ಕೆ ಮನದಟ್ಟು ಮಾಡಲಾಗಿದೆ. ಇಬ್ಬರು ಸಚಿವರು ಕೈ ಚೆಲ್ಲಿದ್ದಾರೆ. ನಮಗೆ ಉಳಿದ ಮಾರ್ಗ ಜನಶಕ್ತಿ ಹೋರಾಟ ಎಂದ ಅವರು ಗ್ರಾಮೀಣ ಹಾಗೂ ನಗರ ಪ್ರದೇಶದ 'ಜನರು ಸ್ವಯಂ ಪ್ರೇರಿತರಾಗಿ ಬರಬೇಕು. ಕೆಲಸ ನಿಲ್ಲಿಸಿ ನಮ್ಮ ನೀರಿನ ಹಕ್ಕು ಪಡೆಯಬೇಕು ಎಂದು ಕರೆ ನೀಡಿದರು.

–ಸೊಗಡು ಶಿವಣ್ಣ, ಮಾಜಿ ಸಚಿವ

ಸಿ.ಎಸ್.ಪುರ ಹೋಬಳಿಯಿಂದ ರಾಜಕೀಯ ಶಕ್ತಿ ಪಡೆದ ಶಾಸಕ ಶ್ರೀನಿವಾಸ್ ಅವರು ಹೋಬಳಿಗೆ ನೀರಿನ ವಿಚಾರದಲ್ಲಿ ಆಗುತ್ತಿರುವ ಅನ್ಯಾಯವನ್ನು ಪ್ರಶ್ನಿಸಿ ಕೆಲಸ ನಿಲ್ಲಿಸಬೇಕಿತ್ತು. ನಮ್ಮ ಹೋರಾಟಕ್ಕೆ ಕೈ ಜೋಡಿಸದೆ ಪ್ರತ್ಯೇಕ ಹೋರಾಟ ಮಾಡುತ್ತಾರಂತೆ. ಹಾಗಾದರೆ ನಾವು ನಿಮ್ಮ ಹೋರಾಟಕ್ಕೆ ಬರುತ್ತೇವೆ. ನೀರು ಉಳಿಸಿಕೊಳ್ಳುವುದು ನಮಗೆ ಮುಖ್ಯಎಂದ ಅವರು ತಾಕತ್ತು ನನಗಿದೆ. ಗುಬ್ಬಿಗೆ ಬರುತ್ತೇನೆ. ಯಾರಿಗೂ ಹೆದರಲ್ಲ. ಹೋರಾಟಗಾರನಾಗಿ ಬಂದವನು ನಾನು. ಈ ಗುಳ್ಳೆನರಿ ಬುದ್ದಿ ನನಗಿಲ್ಲ. ಮೊದಲು ಈ ಕಳ್ಳಾಟ ಬಿಟ್ಟು ಜಿಲ್ಲೆಯ ಜನಪರ ನಿಂತು ನೀರು ಉಳಿಸುವ ಕೆಲಸ ಮಾಡಿ ಎಂದು ನೇರ ಪ್ರತಿಕ್ರಿಯೆ ನೀಡಿದರು.

ಲಾರಿಗೆ ಅಡ್ಡಲಾಗಿ ಮಲಗಿದ ಮಾಜಿ ಸಚಿವ ಸೊಗಡು ಶಿವಣ್ಣ ಅವರನ್ನು ಸಮಾಧಾನ ಪಡಿಸುವುದು ಕಷ್ಟವಾಯಿತು. ರಸ್ತೆಧರಣಿ ನಂತರ ವೇ ಬ್ರಿಡ್ಜ್ ಬಳಿ ನಿಂತಿದ್ದ ಕೆಲಸದ ಶೆಡ್ ಬಳಿ ತೆರಳಿದ ರೈತರು ಲಾರಿಗಳನ್ನು ವಾಪಸ್ ಕಳುಹಿಸುವ ಕೆಲಸ ಮಾಡಿದರು. ಪೊಲೀಸರು ಮುನ್ನೆಚ್ಚರಿಕೆ ವಹಿಸಿ ರೈತರನ್ನು ಸಮಾಧಾನ ಪಡಿಸುವ ಕೆಲಸ ಮಾಡಿದರು. ನಂತರ ಲಾರಿಗಳನ್ನು ವಾಪಸ್ ಕಳುಹಿಸಿ ಪೋನ್ ಮೂಲಕ ಇಂಜಿನಿಯರ್‌ಗೆ ಶಾಸಕ ಕೃಷ್ಣಪ್ಪ ಎಚ್ಚರಿಕೆ ನೀಡಿ ಮುಂದಿನ ಪ್ರತಿಭಟನೆ ಜೆಸಿಬಿ ಯಂತ್ರ ಬಳಸಿ ಕೆನಾಲ್ ಮುಚ್ಚುವ ಮೂಲಕ ಹೋರಾಟದ ಸ್ವರೂಪ ಬದಲಿಸಿ ಮುನ್ಸೂಚನೆ ನೀಡಿದರು.

ಪ್ರತಿಭಟನೆಯಲ್ಲಿ ಶಾಸಕರ ಪುತ್ರರಾದ ರಾಜೀವ್ ಕೃಷ್ಣಪ್ಪ, ವೆಂಕಟೇಶ್ ಕೃಷ್ಣಪ್ಪ, ಮುಖಂಡ ನಂಜೇಗೌಡ, ಜೆಡಿಎಸ್ ಜಿಲ್ಲಾ ಕಾರ್ಯದರ್ಶಿ ಬೋರಪ್ಪನಹಳ್ಳಿ ಕುಮಾರ್, ಹೋಬಳಿ ಅಧ್ಯಕ್ಷ ಜಗದೀಶ್, ನವೀನ್, ಮುಖಂಡರಾದ ಸುಶಾಂತ್, ಬೀರಮಾರನಹಳ್ಳಿ ನರಸೇಗೌಡ, ವೀರಣ್ಣಗುಡಿ ಇದ್ದರು.

# ಬೇಸಿಗೆ ಶಿಬಿರ ಮಕ್ಕಳಲ್ಲಿ ಕ್ರೀಡಾಮನೋಭಾವ, ಬೌದ್ಧಿಕ ಮಟ್ಟ ಹೆಚ್ಚಿಸುತ್ತವೆ

ಮುಳಬಾಗಿಲು : ಬೈರಕೂರು ಹೋಬಳಿ ಮುದಿಗೆರೆ ಮಜರಾ ಗಡ್ಡೂರು ಗ್ರಾಮ ಪಂಚಾಯಿತಿಯ ಡಿಜಿಟಲ್ ಹಾಗೂ ಮಾಹಿತಿ ಅರಿವು ಗ್ರಂಥಾಲಯದಲ್ಲಿ ಕಳೆದ ಎಂಟು ದಿನಗಳಿಂದ ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರ ಹಮ್ಮಿಕೊಂಡಿದ್ದು ಮಕ್ಕಳು ಹಲವು ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮ, ಹಾಡುಗಾರಿಕೆ ಹೇಳುವ ಮೂಲಕ ಗಮನ ಸೆಳೆಯಿತು.

ಮುದಿಗೆರೆ ಮಜರಾ ಗಡ್ಡೂರು ಡಿಜಿಟಲ್ ಗ್ರಂಥಾಲಯ ಮಾಹಿತಿ ಹಾಗೂ ಅರಿವು ಕೇಂದ್ರದ ಗ್ರಂಥಪಾಲಕ ನರಸಿಂಹಶೆಟ್ಟಿಯಿಂದ ಗ್ರಾಮೀಣ ಪ್ರದೇಶಗಳಲ್ಲಿರುವ ಮಕ್ಕಳು ತಮ್ಮ ಬೇಸಿಗೆ ರಜೆಯನ್ನು ಮನರಂಜನೆಗಾಗಿ ಬೇಸಿಗೆ ಶಿಬಿರವನ್ನು ಗ್ರಂಥಾಲಯದಲ್ಲಿ ಆಯೋಜಿಸಲಾಗಿದ್ದು ಓದುವುದು, ಬರೆಯುವುದು, ಅಂಕಿ ಸಂಖ್ಯೆ, ವಿಜ್ಞಾನದ ವಿಷಯಗಳು, ನಾಯಕತ್ವ ಮತ್ತು ಸಂವಹನ ಕೌಶಲ್ಯವನ್ನು ಹೆಚ್ಚಿಸುವುದು, ಪರಿಸರ ಕಾಳಜಿ, ಸಾಮಾಜಿಕ ಕಾಳಜಿ ಬೆಳೆಸುವುದು, ಸ್ಥಳೀಯ ಸಂಸ್ಕೃತಿ, ಜೀವನ ಶೈಲಿ, ಇತಿಹಾಸ ಅಂಶಗಳನ್ನು ತಿಳಿಸುವುದು. ಮಕ್ಕಳಿಗೆ ಸೃಜನಾತ್ಮಕ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು.



ಶಿಬಿರದ ಚಟುವಟಿಕೆಗಳು :–

ಮಕ್ಕಳು ಪುಸ್ತಕ, ದಿನಪತ್ರಿಕೆ, ನಿಯತಕಾಲಿಕೆಗಳನ್ನು ಓದುವುದು, ಚಿತ್ರ ನೋಡಿ ಓದುವಿಕೆ. ಕಥೆ ಕಟ್ಟುವಿಕೆ, ನಿಧಿ ಶೋಧ, ಗಟ್ಟಿ ಓದು ಹಾಗೂ ಪತ್ರ ಬರವಣಿಗೆ ಈ ಬೇಸಿಗೆ ಶಿಬಿರದಲ್ಲಿ ಆಯೋಜಿಸಲಾಗಿತ್ತು. ಗಣಿತದ ಗಣಾಕೃತಿಗಳ ಪರಿಚಯ, ಚಿನ್ನಿದಾಂಡು, ಗ್ರಾಮದಲ್ಲಿ ಬಳಸುವ ಅಳತೆ ಮತ್ತು ಮಾಪಕಗಳ ಟ್ಯಾನ್ ಗ್ರ್ಯಾಮ್, ಪೇಪರ್ ಪ್ಯಾನ್, ಜೆಟ್ ಪ್ಲೈನ್, ಕಣ್ಣು ಮಿಟುಕಿಸುವ ಗೊಂಬೆ, ಚದುರಂಗದಾಟ, ಕೇರಂ, ಆಕಾಶ ವೀಕ್ಷಣೆ ಮತ್ತಿತರ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು.

ಗ್ರಂಥಪಾಲಕ ನರಸಿಂಹಶೆಟ್ಟಿ ಮಾತನಾಡಿ ಮಕ್ಕಳ ಬೇಸಿಗೆ ಶಿಬಿರದಲ್ಲಿ ಇಂತಹ ಚಟುವಟಿಕೆಗಳಲ್ಲಿ ಭಾಗವಹಿಸಿ ಮಕ್ಕಳು ಕ್ರೀಡಾಮನೋಭಾವ ಬೌದ್ಧಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಗ್ರಾಮೀಣ ಬದುಕಿನ ದೈನಂದಿನ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ಅರ್ಥ ಮಾಡಿಸಿ ಯಶಸ್ವಿಯಾಗಿ ಬೇಸಿಗೆ ಶಿಬಿರವನ್ನು ನಡೆಸಿ ಮಕ್ಕಳು ಉತ್ಸಾಹದಿಂದ ಪಾಲ್ಗೊಂಡು ಅನೇಕ ವಿಚಾರಗಳನ್ನು ತಿಳಿದುಕೊಂಡಿದ್ದಾರೆ ಎಂದು ತಿಳಿಸಿದರು.

# ಬಸವ ಜಯಂತಿ ಮತ್ತು ರೇಣುಕಾಚಾರ್ಯರ ಜಯಂತಿ ಆಚರಣೆ




ಬೆಂಗಳೂರು: ಚಿಕ್ಕಬಾಣಾವರದ ರಾಘವೇಂದ್ರ ಬಡಾವಣೆಯ ಶ್ರೀ ರಾಘವೇಂದ್ರ ಪವನ್ ಮಂದಿರದಲ್ಲಿ ವಿಶ್ವ ವೀರಶೈವ ಲಿಂಗಾಯತ ವೇದಿಕೆ ಸಹಯೋಗದೊಂದಿಗೆ ಶ್ರೀ ವೀರಶೈವ ಲಿಂಗಾಯತ ವೇದಿಕೆ ವತಿಯಿಂದ 13ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ ಮತ್ತು ಬಸವ ಜಯಂತಿ ಹಾಗೂ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮ ಆಯೋಜಿಸಲಾಯಿತು.

ಸಮಾರಂಭದಲ್ಲಿ ವೀರಶೈವ ಲಿಂಗಾಯತ ವಟುಗಳಿಗೆ ಉಚಿತ ಲಿಂಗದೀಕ್ಷೆ ನೆರವೇರಿಸಲಾಯಿತು. ಸಮುದಾಯದ ಹಿರಿಯರಿಗೆ ಸನ್ಮಾನ ಮತ್ತು ಸಮುದಾಯದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಯುವಕರಿಗೆ ಸನ್ಮಾನ ಮಾಡಲಾಯಿತು.

ಬಸವೇಶ್ವರರ ಮತ್ತು ರೇಣುಕಾಚಾರ್ಯರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಸಲ್ಲಿಸಿ ವಚನ ಗಾಯನ ಮತ್ತು ಭರತನಾಟ್ಯ ಜರುಗಿತು.

ಸಮಾರಂಭದಲ್ಲಿ ವೀರ ಧರ್ಮಸಿಂಹಾಸನ ಸಂಸ್ಥಾನ ಮಠದ ಶ್ರೀ ಪಟ್ಟದ ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ, ಖಾನಿ ಮಠದ ಶ್ರೀ ಬಸವರಾಜ ಸ್ವಾಮೀಜಿ ಮತ್ತು ಬಸವಜ್ಞಾನ ಸೆಂಟರ್ ಅಧ್ಯಕ್ಷರಾದ ಓಂಕಾರೇಶ್ವರಿ ಅವರಿಂದ ಆಶೀರ್ವಚನ ನಡೆಯಿತು.

ವೇದಿಕೆಯ ಅಧ್ಯಕ್ಷ ಎಂ.ಹೆಚ್. ಪಾಟೀಲ್, ಸಾಹಿತಿ ವೈ.ಬಿ.ಎಚ್ ಜಯದೇವ್, ಉಪನ್ಯಾಸಕಿ ಸುಜಾತ ಮೇಲೇಗೌಡ, ರವಿಕುಮಾರ್, ಸೋಲಾರ್ ಸುಬ್ಬಣ್ಣ, ಗಂಗಾಧರ ಸ್ವಾಮಿ, ಪದಾಧಿಕಾರಿಗಳಾದ ರವಿಕುಮಾರ್, ಕಾಂತರಾಜು ಮುಂತಾದವರಿದ್ದರು.

# ಮತದಾರರ ಪಟ್ಟಿ ಪ್ರಕಟ

ಚಿಕ್ಕಬಳ್ಳಾಪುರ: ಕರ್ನಾಟಕ ಆಗ್ನೇಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯನ್ನು ತಯಾರಿಸಿ 2023ನೇ ಡಿಸೆಂಬರ್ 30 ರಂದು ಅಂತಿಮ ಮತದಾರರ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿದೆ.

ಪ್ರಸ್ತುತ ಭಾರತ ಚುನಾವಣಾ ಆಯೋಗದ 2024ನೇ ಮೇ 2ರ ಪ್ರಕಟಣೆಯಂತೆ, ಕರ್ನಾಟಕ ಆಗ್ನೇಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯನ್ನು ಪರಿಷ್ಕರಿಸಿ ಮೇ 16ಕ್ಕೆ ಅಂತಿಮಗೊಳಿಸಿ, ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದೆ ಎಂದು ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರು ಹಾಗೂ ಮತದಾರರ ನೋಂದಣಾಧಿಕಾರಿಗಳು ತಿಳಿಸಿದ್ದಾರೆ.

# ಪಾಂಡುರಂಗ ಸ್ವಾಮಿ ಅಲಂಕಾರದಲ್ಲಿ ಗೋವಿಂದರಾಜ ಸ್ವಾಮಿ

ತಿರುಪತಿ: ಶ್ರೀ ಗೋವಿಂದರಾಜಸ್ವಾಮಿ ಬ್ರಹ್ಮೋತ್ಸವದ ತಿರುಪತಿ ತಿರುಮಲದಲ್ಲಿ ನಾಲ್ಕನೇ ದಿನಕ್ಕೆ ಮುಂದುವರಿದಿದ್ದು ಭಾನುವಾರ ರಾತ್ರಿ ಸರ್ವಭೂಪಾಲನ ವಾಹನದ ಮೇಲೆ ತಿರುಪತಿ ಪಾಂಡುರಂಗ ಸ್ವಾಮಿ ಅಲಂಕಾರದಲ್ಲಿ ಸ್ವಾಮಿಯು ಕಂಗೊಳಿಸಿ, ಭಕ್ತರಿಗೆ ದರ್ಶನ ಪಡೆ ನೀಡಿದನು.

ಸಂಜೆ 7 ಗಂಟೆಗೆ ವಾಹನ ಸೇವೆ ಆರಂಭವಾಗಿದ್ದು, ಪ್ರತಿ ಹೆಜ್ಜೆಗೂ ಭಕ್ತರು ಕರ್ಪೂರ ಅರ್ಪಿಸಿ ದೇವರಿಗೆ ಪೂಜೆ ಸಲ್ಲಿಸಿದರು. ಸರ್ವಭೂಪಾಲ ವಾಹನ ಅಲಂಕಾರವನ್ನು ಯಶೋಪ್ರಾಪ್ತಿಗಾಗಿ ಆಚರಿಸಲಿದ್ದು, ಸರ್ವ ಭೂಪಾಲ ಎಂದರೆ ಎಲ್ಲಾ ರಾಜರು ಅವರ ಜೊತೆ ನಿರ್ದೇಶಕರೂ ಸೇರುತ್ತಾರೆ. ಎಲ್ಲರೂ ಸ್ವಾಮಿಯನ್ನು ಹೆಗಲ ಮೇಲೆ ಮತ್ತು ಹೃದಯದಲ್ಲಿ ಸೇವೆ ಮಾಡುತ್ತಾರೆ. ಹೀಗಾಗಿ ಅವರ ಆಳ್ವಿಕೆಯಲ್ಲಿ ಜನ ಧನ್ಯರಾಗುತ್ತಾರೆ ಎಂಬ ಸಂದೇಶವನ್ನು ಸಂಜೆ 7 ಗಂಟೆಗೆ ವಾಹನ ಸೇವೆ ಆರಂಭವಾಗಿದ್ದು, ಪ್ರತಿ ಹೆಜ್ಜೆಗೂ ಭಕ್ತರು ಕರ್ಪೂರ ಅರ್ಪಿಸಿ ದೇವರಿಗೆ ಪೂಜೆ ಸಲ್ಲಿಸಿದರು. ಸರ್ವಭೂಪಾಲ ವಾಹನ ಅಲಂಕಾರವನ್ನು ಯಶೋಪ್ರಾಪ್ತಿಗಾಗಿ ಆಚರಿಸಲಿದ್ದು, ಸರ್ವ ಭೂಪಾಲ ಎಂದರೆ ಎಲ್ಲಾ ರಾಜರು ಅವರ ಜೊತೆ ನಿರ್ದೇಶಕರೂ ಸೇರುತ್ತಾರೆ. ಎಲ್ಲರೂ ಸ್ವಾಮಿಯನ್ನು ಹೆಗಲ ಮೇಲೆ ಮತ್ತು ಹೃದಯದಲ್ಲಿ ಸೇವೆ ಮಾಡುತ್ತಾರೆ. ಹೀಗಾಗಿ ಅವರ ಆಳ್ವಿಕೆಯಲ್ಲಿ ಜನ ಧನ್ಯರಾಗುತ್ತಾರೆ ಎಂಬ ಸಂದೇಶವನ್ನು ಈ ವಾಹನಸೇವೆಯಿಂದ ತಿಳಿಯಬಹುದು. ವಾಹನ ಸೇವೆಯಲ್ಲಿ ತಿರುಮಲ ಪೆದ್ದ ಜೀಯರಸ್ವಾಮಿ, ಚಿನ್ನ ಜೀಯರಸ್ವಾಮಿ, ಎಫ್‌ಎ ಮತ್ತು ಸಿಎಒ ಬಾಲಾಜಿ, ದೇವಸ್ಥಾನದ ಉಪಇಒ ಶಾಂತಿ, ಆಗಮ ಸಲಹೆಗಾರರಾದ ಸೀತಾರಾಮಾ ಚಾರ್ಯ, ಮೋಹನರಂಗಾಚಾರ್ಯ, ಅಧೀಕ್ಷಕ ಮೋಹನರಾವ್, ದೇವಸ್ಥಾನದ ನಿರೀಕ್ಷಕ ಧನುಂಜಯು ಇನ್ನಿತರರು ಭಾಗವಹಿಸಿದ್ದರು.



# ಪೊಲೀಸರ ಸರ್ಪಗಾವಲು ನಡುವೆ ಕೆನಾಲ್ ಮುಚ್ಚಿ ಪ್ರತಿಭಟನೆ

ಗುಬ್ಬಿ: ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಯೋಜನೆ ವಿರುದ್ಧದ ಹೋರಾಟದ ಸ್ವರೂಪ ಬದಲಿಸಿಕೊಂಡು ರೈತರು ಜೆಸಿಬಿ ಯಂತ್ರ ಬಳಸಿ ಕೆನಾಲ್ ಮುಚ್ಚಿ ತಮ್ಮ ಆಕ್ರೋಶ ವ್ಯಕ್ತಪಡಿಸಿದ ಘಟನೆ ತಾಲ್ಲೂಕಿನ ಸಿ.ಎಸ್.ಪುರ ಹೋಬಳಿ ಚನ್ನೇನಹಳ್ಳಿ ಗ್ರಾಮದ ಬಳಿ ನಡೆದಿದೆ.

ಸಿ.ಎಸ್.ಪುರ ಅಮಾನಿಕೆರೆಗೆ ಹೊಂದಿಕೊಂಡಂತೆ ನಡೆದಿರುವ ಕೆನಾಲ್ ಕಾಮಗಾರಿ ಈಗಾಗಲೇ ಪೈಪ್ ಹಾಕುವ ಹಂತ ತಲುಪುತ್ತಿದೆ. ಇತ್ತೀಚಿಗೆ ಸಾವಿರಾರು ರೈತರೊಟ್ಟಿಗೆ ನಡೆದ ಬೃಹತ್ ಪ್ರತಿಭಟನೆ ವೇಳೆ ಕಾಮಗಾರಿ ನಿಲ್ಲಿಸಿ ಜೂನ್ 6 ರಗಡುವು ನೀಡಲಾಗಿತ್ತು. ಆದರೆ ಬೃಹತ್ ಪೈಪ್‌ತಂದು ಕೆಲಸ ಮುಂದುವರೆಸುವ ಹುನ್ನಾರ ನಡೆಸಿದ ಅಧಿಕಾರಿಗಳು ರೈತರ ಹೋರಾಟಕ್ಕೆ ಬೆಲೆ ನೀಡಿಲ್ಲ. ಈ ನಿಟ್ಟಿನಲ್ಲಿ ಆಕ್ರೋಶಗೊಂಡ ರೈತರು ಶಾಂತಿಯುತ ಪ್ರತಿಭಟನೆಯ ಸ್ವರೂಪ ಬದಲಿಸಿಕೊಂಡು ಕೆನಾಲ್ ಮುಚ್ಚುವ ಹೋರಾಟ ಆರಂಭಿಸಿದ್ದಾರೆ. ಸಾಂಕೇತಿಕ ಹೋರಾಟ ಹಂತ ಹಂತವಾಗಿಎಲ್ಲಾಕಡೆ ನಡೆಸಲು ನಿರ್ಧರಿಸಲಾಯಿತು.



ಪ್ರತಿಭಟನಾಕಾರರನ್ನು ಉದ್ದೇಶಿಸಿ ಶಾಸಕ ಎಂ.ಟಿ.ಕೃಷ್ಣಪ್ಪ ಮಾತನಾಡಿ ಭೂ ಸ್ವಾಧೀನದ 41 ಹಾಗೂ 61 ಪ್ರಕ್ರಿಯೆ ಯಾವುದೇ ನಡೆದಿಲ್ಲ. ಕಾಮಗಾರಿಯ ಡಿಪಿಆರ್ ಗೊತ್ತಿಲ್ಲ. ರೈತರಿಗೆ ನೋಟಿಸ್ ನೀಡಿಲ್ಲ. ಸರ್ಕಾರಿ ಜಾಗದಲ್ಲಿ ಕೆಲಸ ಆರಂಭಿಸೋದಕ್ಕೆ ಕಂದಾಯ ಇಲಾಖೆ ಅನುಮತಿ ಸಿಕ್ಕಿಲ್ಲ. ಇವೆಲ್ಲವನ್ನೂ ಜಿಲ್ಲಾಧಿಕಾರಿ ತಹಶೀಲ್ದಾರ್ ಗಮನಿಸಬೇಕಿತ್ತು.

ಜಾಣ ಮೌನ ತಾಳಿರುವ ಮೇಲಾಧಿಕಾರಿಗಳು ಸರ್ಕಾರದ ಕೈ ಗೊಂಬೆ ಎನ್ನುವುದು ಇಲ್ಲಿ ತಿಳಿಯುತ್ತದೆ. ಈಗ ಸಾಂಕೇತಿಕವಾಗಿ ಮಣ್ಣು ಮುಚ್ಚುವ ಕೆಲಸ ಮಾಡಿದ್ದೇವೆ. ಶೀಘ್ರದಲ್ಲಿ ಗುತ್ತಿಗೆದಾರರು ಕೆನಾಲ್ ಮುಚ್ಚಬೇಕು. ಇಲ್ಲವಾದಲ್ಲಿ ಹೋರಾಟದ ಕಿಚ್ಚು ಯಾವುದೇ ಅನಾಹುತಕ್ಕೆ ಕಾರಣವಾದರೂ ಸರ್ಕಾರ ನೇರ ಹೊಣೆ ಎಂದು ಎಚ್ಚರಿಕೆ ನೀಡಿದರು.

ಮಾಜಿ ಶಾಸಕ ಮಸಾಲಾ ಜಯರಾಮ್ ಮಾತನಾಡಿ ಬೃಹತ್ ಪೈಪ್ ಅಳವಡಿಸಿದರೆ ಈ ರೈತರಿಗೆ ಮರಣ ಶಾಸನ ಬರೆದಂತೆ. 14 ಅಡಿ ವ್ಯಾಸದ ಪೈಪ್ ಏಕ ಕಾಲದಲ್ಲಿ 900 ಕ್ಯೂಸೆಕ್ಸ್ ನೀರು ಸೆಳೆಯುವ ತಾಕತ್ತು ಇರುತ್ತದೆ. ಒಂದು ತೊಟ್ಟು ನೀರು ನಮಗೆ ಸಿಗೋದಿಲ್ಲ. ಈಗಾಗಲೇ ಮುಖ್ಯ ನಾಲೆ ಆಧುನೀಕರಣಗೊಂಡಿದೆ. ಕುಣಿಗಲ್ ಭಾಗಕ್ಕೆ ಸರಾಗವಾಗಿ ನೀರು ಹೋಗುತ್ತಿದೆ. ಯಾವ ತೊಂದರೆ ಇಲ್ಲದಿದ್ದರೂ ಈ ಯೋಜನೆ ರೂಪಿಸಿರೋದು ರಾಮನಗರ ಕಡೆ ನೀರು ತೆಗೆದುಕೊಂಡು ಹೋಗಲು ತಯಾರಿ ನಡೆಸಿದ್ದಾರೆ. ಈ ಜೊತೆಗೆ ಯಾವ ಇಲಾಖೆ ಅನುಮತಿಇಲ್ಲದೆ ಸರ್ಕಾರಿಜಾಗ ಕಬಳಿಕೆ, ದೊಡ್ಡ ಮರಗಳು ಕತ್ತರಿಸಿದ್ದಾರೆ ಎಂದ ಅವರು ಜಿಲ್ಲೆಯ ಸಚಿವರು ಕಾಮಗಾರಿರದ್ದು ಮಾಡಿಸಲು ಆಗದಿದ್ದರೆ ರಾಜೀನಾಮೆ ನೀಡಿ ಹೋರಾಟಕ್ಕೆ ಬರಲಿ ಎಂದು ಆಹ್ವಾನ ನೀಡಿದರು.

ಮಾಜಿ ಸಚಿವ ಸೊಗಡು ಶಿವಣ್ಣ ಮಾತನಾಡಿ ಕೆರೆ ಜಾಗ ಬಳಸಲು ಸಣ್ಣ ನೀರಾವರಿ ಇಲಾಖೆ ಅನುಮತಿ ಪಡೆದಿಲ್ಲ. ಮರ ಕಡಿಯಲು ಅರಣ್ಯ ಇಲಾಖೆ ಅನುಮತಿ ಇಲ್ಲ, ಕಂದಾಯ ಇಲಾಖೆ ಯಿಂದ ಭೂಮಿ ಹಸ್ತಾಂತರ ನಡೆದಿಲ್ಲ. ಹೀಗೆ ಎಲ್ಲಾ ಕಾನೂನು ಗಾಳಿಗೆ ತೂರಿ ಪ್ರಜಾಪ್ರಭುತ ಕೈಗೆತ್ತಿಕೊಂಡು ಸರ್ವಾಧಿಕಾರ ಧೋರಣೆ ತೋರಿದ್ದಾರೆ. ಕುಣಿಗಲ್ ಗೆ ನೀರುಕೊಡಲು ನಮ್ಮ ಅಡ್ಡಿ ಇಲ್ಲ. ನಮ್ಮ ನೀರು ಮುಂದುವರೆದು ಮಾಗಡಿಕಡೆ ಹರಿಸಲು ನಮ್ಮ ವಿರೋಧವಿದೆ. ಮಾಗಡಿ, ರಾಮನಗರಕ್ಕೆ ಕಾವೇರಿ ನೀರು ಹರಿಸಿಕೊಳ್ಳಲಿ ಎಂದ ಅವರು ನಮ್ಮ ಹೋರಾಟ ನಿರಂತರ ನಡೆಯಲಿದೆ. ಯೋಜನೆ ಕೈ ಬಿಡಬೇಕು. ಇಲ್ಲವಾದಲ್ಲಿ ಹೋರಾಟ ಸರ್ಕಾರಕ್ಕೆ ತಕ್ಕ ಪಾಠ ಕಲಿಸಲಿದೆ ಎಂದು ಎಚ್ಚರಿಸಿದರು.

ಬಿಜೆಪಿ ಮುಖಂಡ ಎಸ್.ಡಿ.ದಿಲೀಪ್ ಕುಮಾರ್ ಮಾತನಾಡಿ ಬೃಹತ್ ಪೈಪ್ ಲೈನ್ ಗುರುತ್ವಾಕರ್ಷಣೆಗೆ ಅನುಗುಣವಾಗಿ ಅಳವಡಿಸಿ ನಮ್ಮ ನಾಲೆಯಿಂದ ಎಲ್ಲಾ ನೀರು ಸೆಳೆಯುವ ಹುನ್ನಾರ ನಡೆದಿದೆ. ಮೂರು ತಿಂಗಳು ಹರಿದರೆ 11 ಟಿಎಂಸಿ ನೀರುಕುಣಿಗಲ್ ನತ್ತ ಹೋಗಲಿದೆ. ಅವರ ಮೂರು ಟಿಎಂಸಿ ಆಧುನೀಕರಣಗೊಂಡ ನಾಲೆಯ ಮೂಲಕ ಪಡೆಯಲಿ. ಪೈಪ್ ಲೈನ್ ಮೂಲಕ ಯಾವಕಡೆ ನೀರು ಹೋಗಲಿದೆ ಎಂಬುದು ಇಲ್ಲಿನ ಎಲ್ಲಾ ರೈತರಿಗೆ ತಿಳಿದಿದೆ.

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjaneevartheepaper.com
22 WEDNESDAY MAY 2024
22 ಬುಧವಾರ ಮೇ 2024

# ಬೇವಿನಳಮ್ಮ ದೇವಿ ಜಲಧಿ ಮಹೋತ್ಸವ ವಿಜೃಂಭಣೆಯಿಂದ ನೆಡೆಯಿತು

ಕೊರಟಗೆರೆ:-ತಾಲ್ಲೂಕಿನ ಚನ್ನರಾಯದುರ್ಗ ಹೋಬಳಿಯ ಜೆಟ್ಟಿ ಅಗ್ರಹಾರ ಕೆರೆಯಂಗಳದಲ್ಲಿ ಏಳು ಹಳ್ಳಿ ಗ್ರಾಮದೇವತೆ ಶ್ರೀ ಬೇವಿನಳಮ್ಮ ತಾಯಿಯ ಜಲಧಿ ಮಹೋತ್ಸವ ಶ್ರದ್ಧಾಭಕ್ತಿಯಿಂದ ನೆರವೇರಿತು.ದೇವಿಗೆ ವಿಶೇಷ ಹೂವಿನ ಅಲಂಕಾರ ಭಕ್ತರ ಕಣ್ಣು ಮನ ಸೆಳೆಯುವಂತಿತ್ತು.ಧಾರ್ಮಿಕ ಪೂಜೆ ಸಲ್ಲಿಸಿದ ನಂತರ ಗಂಗಾ ಪೂಜೆ ನೆಡೆಯಿತು. ದೇವಿ ಕುಣಿತದ ನಂತರ ಸಾಮೂಹಿಕ ಪ್ರಸಾದ ವಿನಿಯೋಗ ಕಾರ್ಯಕ್ರಮ ಏರ್ಪಡಿಸಲಾಗಿತ್ತು.



ಸಾಹಿತಿಗಳಾದ ಡಾ ನರಸಿಂಹಮೂರ್ತಿ ಮಾತನಾಡಿ ಸುಮಾರು 250 ವರ್ಷಗಳ ಇತಿಹಾಸವುಳ್ಳ ದೇವಗಾನಿಕೆ ಶ್ರೀ ಬೇವಿನಮ್ಮ ತಾಯಿ ಏಳು ಜನ ಅಕ್ಕತಂಗಿಯರಲ್ಲಿ ತಾಯಿಯು ಒಬ್ಬಳು. ಈ ತಾಯಿಯ ಜಾತ್ರೆ-ಜಲಧಿ ವಿಶೇಷವಾಗಿ ಆಚರಣೆ ಮಾಡುತ್ತಾ ನಮ್ಮ ಪೂರ್ವಿಕರು ಬಂದಿದ್ದಾರೆ ಹಾಗೆ ನಾವು ಕೂಡ ಈ ಆಚರಣೆಯನ್ನು ಮುಂದುವರಿಸುತ್ತಾ ಬಂದಿದ್ದೇವೆ.ಈ ದೇವಿಯ ಜಾತ್ರೆಯನ್ನು ಐದು ವರ್ಷಕ್ಕೊಮ್ಮೆ ಮಾಡುತ್ತಿದ್ದು,ಜಲದಿಯನ್ನು ವರ್ಷಕ್ಕೊಮ್ಮೆ ಬಹಳ ಅರ್ಥಪೂರ್ಣವಾಗಿ ವಿಜೃಂಭಣೆಯಿಂದ ಆಚರಿಸುತ್ತಿದ್ದೇವೆ ಎಂದರು.

ಜಟ್ಟಿ ಅಗ್ರಹಾರ ಎಂದರೇ ಜಟ್ಟಿ ಮನೆತನದವರಿಗೆ ರಾಜರು ಮಹಾರಾಜರು ಉಡುಗೊರೆಯಾಗಿ ನೀಡಿದಂತಹ ಇತಿಹಾಸವುಳ್ಳ ಗ್ರಾಮವಾಗಿದ್ದು, ಇಲ್ಲಿ ನೆಲೆಸಿರುವ ಗ್ರಾಮ ಶಕ್ತಿ ಬೇವಿನಳಮ್ಮ ತಾಯಿಯು ಗ್ರಾಮಕ್ಕೆ ಯಾವುದೇ ತೊಂದರೆ ತೊಡಕುಗಳ ಆಗದಂತೆ ಕಾಪಾಡಿಕೊಂಡು ಬರುತ್ತಿದ್ದಾಳೆ. ಬರಗಾಲ ಬಂದಿರುವುದರಿಂದ ಅದ್ದೂರಿಯಾಗಿ ಜಾತ್ರೆ ಮಾಡಲು ಆಗದ ಕಾರಣ ಜಲದಿಯನ್ನು ಅದ್ದೂರಿಯಾಗಿ ಮಾಡುತ್ತಿದ್ದೇವೆ ಎಂದು ಕಾಂಗ್ರೆಸ್ ಮುಖಂಡ ಮಂಜುನಾಥ್ ತಿಳಿಸಿದರು.

ಈ ಸಂದರ್ಭದಲ್ಲಿ ಪೂಜಾರು ಲಕ್ಷ್ಮೀಶ್, ಗ್ರಾಮಸ್ತಾರದ ತಿಮ್ಮರಾಜು,ಮಧುಸೂಧನ್ ,ಟೈಗರ್ ನಾಗರಾಜು, ಬಸವರಾಜು, ಕೇಬಲ್ ಸಿದ್ದಗಂಗಯ್ಯ, ಮಂಜುನಾಥ್ ,ಹನುವಂತರಾಜು,ಚಂದ್ರಕುಮಾರ್ ,ಸಿದ್ದರಾಜು,ದೇವರಾಜು,ನಾಗರಾಜು,ಕೆಂಪರಾಜುಸೇರಿದಂತೆ ಅಕ್ಕ ಪಕ್ಕ ಗ್ರಾಮಗಳ ಸಮಸ್ತ ಭಕ್ತರು ಭಾಗವಹಿಸಿದ್ದರು.

# ರೈತರ ಮನವಿಯಂತೆ ಜಾನುವಾರುಗಳ ಜೀವ ರಕ್ಷಣೆಗೆ ಮೂರನೇ ಮೇವು ಬ್ಯಾಂಕ್ ಪ್ರಾರಂಭ

ಕೊರಟಗೆರೆ :- ತಾಲೂಕಿನಲ್ಲಿ ಅತಿ ಕಡಿಮೆ ಮಳೆ ಯಾಗುತ್ತಿರುವ ಹಿನ್ನೆಲೆಯಲ್ಲಿ ಕಸಬಾ ಹೋಬಳಿಯಲ್ಲಿ ಮೇವು ಬ್ಯಾಂಕ್‌ನ್ನು ತೆರೆಯಲಾಗಿದೆ ಎಂದು ತಹಶೀಲ್ದಾರ್ ಮಂಜುನಾಥ್ ತಿಳಿಸಿದರು.

ಅವರು ಪಟ್ಟಣದ ಬೈಲಾಂಜನೇಯ ಸ್ವಾಮಿ ದೇವಾಲಯದ ಆವರಣದಲ್ಲಿ ಮೇವು ಬ್ಯಾಂಕ್ ಉದ್ಘಾಟಿಸಿ ಮಾತನಾಡಿ ಕೊರಟಗೆರೆ ತಾಲೂಕು ಸಂಪೂರ್ಣ ಮಳೆ ಆಶ್ರಿತ ಒಣ ಪ್ರದೇಶವಾಗಿದ್ದು ಸರ್ಕಾರದಿಂದ ಬರ ಪೀಡಿತ ತಾಲೂಕು ಎಂದು ಘೋಷಣೆಯಾಗಿದ್ದು ಇತ್ತೀಚೆಗೆ ಜಿಲ್ಲೆಯಲ್ಲಿಯೇ ಅತಿ ಕಡಿಮೆ ಮಳೆಯಾಗಿದೆ ಇದರಿಂದ ರೈತರು ಜಾನುವಾರು ಗಳಿಗೆ ಮೇವು ಹೊಂಚಲು ಸಂಕಷ್ಟ ಪಡುತ್ತಿದ್ದು ತಾಲೂಕಿನ ಕಸಬಾ ಹೋಬಳಿಯಲ್ಲಿ ಮೇವು ಬ್ಯಾಂಕ್‌ನ್ನು ತೆರೆಯಲಾಗಿದೆ, ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತ ರೈತರ ಸಂಕಷ್ಟಕ್ಕೆ ಸ್ಪಂದಿಸಿ ಮೇವು ಬ್ಯಾಂಕ್ ತೆರೆಯಲಾಗಿದೆ ಈಗಾಗಲೆ ತಾಲೂಕಿನ ಹೊಳವನಹಳ್ಳಿ ಹಾಗೂ ಬುಕ್ಕಾಪಟ್ಟಣಗಳಲ್ಲಿ ಮೇವು ಬ್ಯಾಂಕ್ ಪ್ರಾರಂಭಿಸಿದ್ದು ರೈತರ ಮನವಿಯಂತೆ ಕಸಬಾ ಹೋಬಳಿ ರೈತರಿಗೆ ಅನುಕೂಲವಾಗುವಂತೆ ಮೇವು ಬ್ಯಾಂಕ್ ತೆರೆಯಲಾಗಿದೆ, ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಹಾಗೂ ರೈತರು ತಮ್ಮ ಪಹಣಿಯೊಂದಿಗೆ ಆಧಾರ್ ಕಾರ್ಡ್ ಬ್ಯಾಂಕ್ ಖಾತೆಗೆ ಲಿಂಕ್ ಮಾಡಿಸಬೇಕು ಇದರಿಂದ ಸರ್ಕಾರದ ಯೋಜನೆಯ ಅನುಧಾನಗಳನ್ನು ರೈತರ ಖಾತೆಗಳಿಗೆ ನೇರವಾಗಿ ಹಣ ಸಂದಾಯಿಸಲು ಅನುಕೂಲವಾಗುತ್ತದೆ ಎಂದರು.

ಪಶು ಇಲಾಖಾ ಸಹಾಯಕ ನಿರ್ದೇಶಕ ನಾಗಭೂಷಣ್ ಮಾತನಾಡಿ ರಾಜ್ಯದಲ್ಲಿ ಬೀಕರ ಬರಗಾಲದ ಹಿನ್ನೆಲೆಯಲ್ಲಿ ಮೇವು ಇಲ್ಲದೆ ರೈತರು ಪರದಾಡುತ್ತಿದ್ದು ಇದನ್ನು ಮನ ಗೊಂಡ ಸರ್ಕಾರ ಮೇವು ಬ್ಯಾಂ□□ಗಳನ್ನ ತೆರೆಯಲು ಆದೇಶಿಸಿದೆ, ಈಗಾಗಲೆ ಮಳೆ ಪ್ರಾರಂಭವಾಗಿದ್ದರೂ ಇನ್ನು ಕೆಲವು ದಿನಗಳ ಕಾಲ ಮೇವಿಗೆ ಅಭಾವವಿರುತ್ತದೆ, ಅದರಲ್ಲೂ ಕೊರಟಗೆರೆ ತಾಲೂಕಿನಲ್ಲಿ ಇತ್ತೀಚೆಗೆ ಜಿಲ್ಲೆಯಲ್ಲಿಯೇ ಅತಿ ಕಡಿಮೆ ಮಳೆ ಯಾಗಿದೆ, ಅದಕ್ಕಾಗಿ ಕಸಬಾ ಹೋಬಳಿಯ ಮೂರನೇ ಮೇವು ಬ್ಯಾಂಕ್ ತೆರೆದಿದ್ದು ರೈತರು ಸಂಯಮದಿಂದ ಶಾಂತಿಯಿಂದ ಮೇವನ್ನು ಪಡೆಯಬೇಕು, ಪ್ರತಿಯೊಬ್ಬ ಜಾನುವಾರು ಹೊಂದಿರುವ ರೈತರಿಗೆ ಮೇವು ತಲುಪಿಸುವುದು ನಮ್ಮ ಕರ್ತವ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಪಶು ಇಲಾಖೆಯ ಡಾ.ಮಂಜನಾಥ್, ಡಾ.ಚಂದ್ರಶೇಖರ್, ಕಂದಾಯ ಇಲಾಖೆಯ ಕಸಬಾ ಆರ್.ಐ ಬಸವರಾಜು, ವಿ.ಎ.ಗಳಾದ ಮೋಹ□□ಕುಮಾರ್, ಪವನ್ ಕುಮಾರ್, ಗುರುಶಂಕರ್, ಮೀನಾಕುಮಾರಿ, ಪ.ಪಂ. ಅನಿತಾಲಕ್ಷ್ಮಿ ಹಾಗೂ ಕಂದಾಯ ಸಿಬ್ಬಂದಿಗಳು ಹಾಜರಿದ್ದರು.





# ಮಹಿಳಾ ಕಲಾವಿದರಿಂದ ಕುರುಕ್ಷೇತ್ರ ನಾಟಕ ಪ್ರದರ್ಶನ

ಮಧುಗಿರಿ ಕಸಬಾ ವ್ಯಾಪ್ತಿಯ ಬಸವನಹಳ್ಳಿ ಗ್ರಾಮದ ಮಹಿಳಾ ಕಲಾವಿದರಿಂದ ಅಭಿನಯಿಸಿದ ಕುರುಕ್ಷೇತ್ರ ನಾಟಕವನ್ನು ಯಶಸ್ವಿಯಾಗಿ ಪ್ರದರ್ಶನ ನೀಡಿದ ಎಲ್ಲ ಮಹಿಳಾ ಕಲಾವಿದರಿಗೆ ಬಸವನಹಳ್ಳಿ ಪ್ರಾಥಮಿಕ ಶಾಲೆ, ಹಳೆ ವಿದ್ಯಾರ್ಥಿಗಳ ಸಂಘ ಮತ್ತು ಶಾಲಾಭಿವೃದ್ಧಿಸಂಘದ ವತಿಯಿಂದ ಸನ್ಮಾನಿಸಲಾಯಿತು. ಶಿಕ್ಷಕರಾದ ಎಸ್. ವಿ ರಮೇಶ್, ರಂಗಪ್ಪ, ಜೆ. ಪಿ. ಮಂಜು ಹಳೆ ವಿದ್ಯರ್ಥಿ ಸಂಘದ ಶಿವಲಿಂಗಪ್ಪ, ಕಾವಲಪ್ಪ, ಮಂಜುನಾಥ್, ನಾರಾಯಣಪ್ಪ ಗೋವಿಂದಪ್ಪ, ರಮೇಶ್, ಕಸಪಾ ಕಾರ್ಯದರ್ಶಿ ರಂಗಧಾಮಯ್ಯ ಇತರರು ಇದ್ದರು.




# ಸಾರ್ವಜನಿಕರ ಗಮನಸೆಳೆದ ನೃತ್ಯರೂಪಕ

ತುಮಕೂರು ತಾಲ್ಲೂಕು ಊರ್ಡಿಗೆರೆಯಲ್ಲಿ ನಡೆದ ಪೂಜಾ ಮಾರಮ್ಮದೇವಿ ಜಾತ್ರಾ ಮಹೋತ್ಸವದಲ್ಲಿ ಸಾಯಿರಾಮನ್ ನೃತ್ಯ ಕೇಂದ್ರದ ತಂಡದವರಿಂದ ವಿದ್ವಾನ್ ಟಿ. ಎಸ್. ಸಾಗರ್ ನೇತೃತ್ವದಲ್ಲಿ ನವದುರ್ಗ ನೃತ್ಯ ಪ್ರದರ್ಶನ ಅಮೋಘವಾಗಿ ಇಂದು ಮೂಡಿ ಬಂದಿತು. ಸಾರ್ವಜನಿಕ ವಲಯದಲ್ಲಿ ನೃತ್ಯ ಪ್ರದರ್ಶನಕ್ಕೆ ಮೆಚ್ಚುಗೆ ವ್ಯಕ್ತವಾಯಿತು. ಈ ಸಂದರ್ಭದಲ್ಲಿ ಸ್ಥಳೀಯ ಜನಪ್ರತಿನಿಧಿಗಳು, ಗ್ರಾಮಸ್ಥರು ಸೇರಿದಂತೆ ಇತರರು ಹಾಜರಿದ್ದರು.

# ನಗರದ ಮನೆ-ವಾಣಿಜ್ಯ ಮಳಿಗೆಗಳ ಕಟ್ಟಡಗಳಿಗೆ ನುಗ್ಗಿದ ನೀರು

ಶಿರಾ: ಹಲವು ತಿಂಗಳುಗಳಿಂದ ಮಳೆ ಇಲ್ಲದೆ ಬಿಸಿಲಿನಿಂದ ಬಸವಳಿದಿದ್ದ ಜನತೆಗೆ ಭಾನುವಾರ ಸಂಜೆ ಒಂದು ಗಂಟೆಗೂ ಹೆಚ್ಚು ಕಾಲ ಸುರಿದ ಭಾರಿ ಮಳೆ ನಗರದ ಹಲವು ಮನೆಗಳಿಗೆ ಹಾಗೂ ವಾಣಿಜ್ಯ ಮಳಿಗೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿದೆ.

ಶಿರಾ ನಗರ ಸೇರಿದಂತೆ ತಾಲೂಕಿನಾದ್ಯಂತ ಭಾನುವಾರ ಸಂಜೆ ಸುರಿದ ಭಾರಿ ಮಳೆಯಿಂದ ನಗರದ ಹಲವು ಬಡಾವಣೆಗಳ ಮನೆಗಳಿಗೆ ಹಾಗೂ ವಾಣಿಜ್ಯ ಮಳಿಗೆಗಳಿಗೆ ನೀರು ನುಗ್ಗಿ ಅಂಗಡಿ ಹಾಗೂ ಮನೆ ಮಾಲೀಕರು ಪರದಾಡುವ ಸ್ಥಿತಿ ಉಂಟಾಗಿತ್ತು. ನಗರದಲ್ಲಿ ಕೆಲ ವಾರ್ಡ್ ಗಳ ಜನತೆ ದಿಕ್ಕೇ ತೋಚದೆ ಕಂಗಲಾಗಿದ್ದಾರೆ. ವಾರ್ಡ್ ನಂಬರ್ 18ರ ಬೇಗಂ ಮೊಹಲ್ಲಾದಲ್ಲಿ ಮನೆಗಳಿಗೆ ನೀರು ನುಗ್ಗಿ ಜಲಾವೃತ್ತಗೊಂಡು ಮನೆಯಲ್ಲಿರುವ ದವಸಧಾನ್ಯ, ಪೀಟೋಪಕರಣಗಳು, ಸೇರಿದಂತೆ ಅನೇಕ ವಸ್ತುಗಳು ನೀರುಪಾಲಾಗಿವೆ. ಬೇಗಂ ಮೊಹಲ್ಲಾದ ನಿವಾಸಿಗಳಿಗೆ ಮಳೆ ಬಂದರೆ ಪ್ರತಿ ವರ್ಷವೂ ಇದೇ ರೀತಿಯ ಸಂಕಷ್ಟ ಎದುರಾಗಲಿದ್ದು, ಸುಮಾರು ಏಳೆಂಟು ವರ್ಷಗಳಿಂದಲೂ ಕೂಡ ಈ ಭಾಗದ ಜನರು ಸಮಸ್ಯೆ ಅನುಭವಿಸುತ್ತಿದ್ದಾರೆ, ಪ್ರತಿ ವರ್ಷವೂ ಕೂಡ ಹಲವು ಬಾರಿ ತಮ್ಮ ಅಳಲನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಸ್ಥಳೀಯ ಜನಪ್ರತಿನಿಧಿಗಳಿ ಹಲವು ಬಾರಿ ಮನವಿ ಮಾಡಿದ್ದರೂ, ಇತ್ತ ಕಡೆ ಗಮನ ಹರಿಸುತ್ತಿಲ್ಲ ಎಂದು ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಳೆಗೆ ಬೇಗಂ ಮೊಹಲ್ಲಾದಲ್ಲಿ ಕರುವೊಂದು ಚರಂಡಿಯಲ್ಲಿ ಸಿಲುಕಿಕೊಂಡಿತ್ತು, ಸ್ಥಳೀಯ ಯುವಕರು ಮಳೆಯನ್ನು ಲೆಕ್ಕಿಸದೆ ಕರುವನ್ನು ರಕ್ಷಿಸಿದ್ದಾರೆ.

ತಾಲೂಕಿನ ಮಳೆ ವಿವರ: ಶಿರಾ ತಾಲೂಕಿನಲ್ಲಿ ಭಾನುವಾರ ರಾತ್ರಿ ಕಸಬಾ ಹೋಬಳಿಯಲ್ಲಿ 33.20 ಮಿ.ಮೀ, ಬುಕ್ಕಾಪಟ್ಟಣ ಹೋಬಳಿಯಲ್ಲಿ 32.20 ಮಿ.ಮೀ, ಗೌಡಗೆರೆ ಹೋಬಳಿಯಲ್ಲಿ 38.40 ಮಿ.ಮೀ, ಹುಲಿಕುಂಟೆ ಹೋಬಳಿಯಲ್ಲಿ 35.40 ಮಿ.ಮೀ, ಕಳ್ಳಂಬೆಳ್ಳ ಹೋಬಳಿಯಲ್ಲಿ 26.60 ಮಿ.ಮೀ ಮಳೆಯಾಗಿದೆ. ಮಳೆಯಿಂದ ಹಲವು ಕೆರೆ ಕಟ್ಟೆ, ಬ್ಯಾರೇಗಳಿಗೆ ನೀರು ಬಂದಿದ್ದು, ರೈತರು ಹರ್ಷಗೊಂಡಿದ್ದಾರೆ.

# ಚಿಣ್ಣರ ನೃತ್ಯಕ್ಕೆ ಮನಸೋತ ಕಲಾ ಪ್ರೇಮಿಗಳು

ಬಳ್ಳಾರಿ: ಕಲಾವಿದರ ಕಲಾ ಪ್ರತಿಭೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಶನಿವಾರದಂದು ನಗರದ ಡಾ.ರಾಜ್‌ಕುಮಾರ್ ರಸ್ತೆಯ ನಾಡೋಜ ಸುಭದ್ರಮ್ಮ ಮನ್ಸೂರು ಬಯಲು ರಂಗಮಂದಿರ ಸಾಂಸ್ಕೃತಿಕ ಸಮುಚ್ಛಯದಲ್ಲಿ ಆಯೋಜಿಸಿದ್ದ 'ತಿಂಗಳ ಸೊಬಗು' ಸಾಂಸ್ಕೃತಿಕ ಕಾರ್ಯಕ್ರಮಗಳು ಜಿಲ್ಲೆಯ ಸಾಂಸ್ಕೃತಿಕ ಗತ ವೈಭವ ಸಾರುವಂತಿತ್ತು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಪ್ರತಿ ತಿಂಗಳ ಮೂರನೇ ಶನಿವಾರದಂದು "ತಿಂಗಳ ಸೊಬಗು" ಕಾರ್ಯಕ್ರಮ ಆಯೋಜಿಸಿ ಸ್ಥಳೀಯ ಮಟ್ಟದ ಕಲಾವಿದರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತವು ಮಹತ್ತರ ಕಾರ್ಯ ಕೈಗೊಂಡಿದೆ ಹಾಗೂ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸವನ್ನು ಸಾರುವ ಕಾರ್ಯವು ಸಾರ್ವಜನಿಕರ ಅಚ್ಚುಮೆಚ್ಚಾಗುತ್ತಿದೆ.

# ರಾಜಕಾಲುವೆ ಸಮಸ್ಯೆ: ಮನೆಗಳಿಗೆ ನೀರು ನುಗ್ಗದಂತೆ ಕ್ರಮ





ಬೆಂಗಳೂರು: ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಎರಡು ವರ್ಷಗಳ ಹಿಂದೆ ಸುರಿದ ಧಾರಾಕಾರ ಮಳೆಯಿಂದಾಗಿ ಕ್ಷೇತ್ರದ ಹಲವು ಬಡಾವಣೆ ಗಳಲ್ಲಿ ರಾಜಕಾಲುವೆಗಳು ತಡೆಗೋಡೆ ಇಲ್ಲದೆ ಇರುವುದು, ಮಣ್ಣು ತುಂಬಿ ಗಿಡಗಂಟೆಗಳು ಬೆಳೆದು ಮಳೆನೀರು ಸರಾಗವಾಗಿ ಹರಿಯದೆ ಸುತ್ತಮುತ್ತಲ ಪ್ರದೇಶದ ಮನೆಗಳಿಗೆ ನುಗ್ಗಿ ಅಲ್ಲಿನ ಪ್ರದೇಶವನ್ನು ಜಲಾವೃತ ಮಾಡಿ ಸಮಸ್ಯೆ ಉಂಟಾಗುತ್ತಿತ್ತು.

ಮುಂದಿನ ತಿಂಗಳು ಮುಂಗಾರು ಪ್ರಾರಂಭವಾಗುವುದರಿಂದ ಮತ್ತೆ ಮಳೆಯಿಂದಾಗಿ ತಗ್ಗು ಪ್ರದೇಶದ ಮನೆಗಳಿಗೆ ಹಾನಿಯಾಗಬಾರದೆಂಬ ಉದ್ದೇಶದಿಂದ ಅಧಿಕಾರಿಗಳು ರಾಜಕಾಲುವೆಗಳ ದುರಸ್ತಿ ಕಾರ್ಯ ಮಾಡಿದ್ದಾರೆ.

ಚೊಕ್ಕಸಂದ್ರ ವಾರ್ಡಿನ ನೆಲಗದರನಹಳ್ಳಿ ಮುಖ್ಯ ರಸ್ತೆಯ ವಾಣಿಜ್ಯ ಮಳಿಗೆಗಳ ಮುಂಭಾಗ ಹಾದು ಹೋಗಿರುವ ರಾಜ ಕಾಲುವೆಯನ್ನು ಮುಚ್ಚಿದ್ದರಿಂದ ಕೆಳಭಾಗದ ತ್ಯಾಜ್ಯ ತುಂಬಿಕೊಂಡು ಕೊಳಚೆ ನೀರು ಮನೆಗಳಿಗೆ ನುಗ್ಗಿ ಹಾನಿ ಉಂಟಾಗುತ್ತಿತ್ತು ಇಡೀ ರಾತ್ರಿ ಮನೆಯ ಮಹಡಿ ಮೇಲೆ ಕಾಲ ಕಳೆಯುವಂತಾಗುತ್ತಿತ್ತು ಅಲ್ಲಿನ ಜೋಡಿ ಬಾವಿ ರಸ್ತೆ, ರುಕ್ಮಿಣಿ ನಗರ, ಬೆಲ್ಮಾರ್ ಬಡಾವಣೆ, ವಿದ್ಯಾ ನಗರ ಮುಂತಾದ ಪ್ರದೇಶಗಳ ಮನೆಗಳಿಗೆ ನೀರು ನುಗ್ಗಿ ರಾತ್ರಿ ಇಡೀ ಮಳೆಯ ನೀರನ್ನು ಹೊರಕ್ಕೆ ಹಾಕುತ್ತಾ ಜನರು ರೋಸಿ ಹೋಗಿ ಪ್ರತಿಭಟನೆ ಕೂಡ ಮಾಡಿದ್ದರು.

ರಾಜ ಕಾಲುವೆಯ ಕೆಳಭಾಗದ ತ್ಯಾಜ್ಯ ಹಾಗೂ ಸ್ಲ್ಯಾಬ್ ತೆರವುಗೊಳಿಸಿ ರಾಜ ಕಾಲುವೆಗೆ ತಡೆಗೋಡೆ, ತಂತಿ ಬೇಲಿ ಹಾಕಿ ಎತ್ತರಿಸಲಾಗಿದೆ. ಕಳೆದ ಎರಡು ವರ್ಷದಿಂದ ಯಾವುದೇ ಮನೆಗಳಿಗೆ ನೀರು ನುಗ್ಗಿಲ್ಲ.

ಬಾಗಲಗುಂಟೆ ವಾರ್ಡಿನ ಸಿಡೆದಹಳ್ಳಿಯ ರಾಜ ಕಾಲುವೆ ಸಮಸ್ಯೆಯಿಂದ ಅಲ್ಲಿನ ರಾಯಲ್ ಎನ್ ಕ್ಲೇವ್ ವಸತಿ ಸಮುಚ್ಚಯ ಮತ್ತು ಸುತ್ತಮುತ್ತಲ ಪ್ರದೇಶದ ಮನೆಗಳಿಗೆ ನೀರು ನುಗ್ಗಿ ಹಾನಿ ಉಂಟಾಗುತ್ತಿತ್ತು.
ಈಗ ರಾಜಕಾಲುವೆ ನೀರು ಸರಾಗವಾಗಿ ಹರಿಯಲು ತ್ಯಾಜ್ಯ ತೆರವುಗೊಳಿಸಿ, ತಡೆಗೋಡೆ ನಿರ್ಮಿಸಲಾಗಿದೆ.

ಸಿದ್ದೇಶ್ವರ ಬಡಾವಣೆ ಕೆಲವು ಪ್ರದೇಶದಲ್ಲಿ ರಾಜ ಕಾಲುವೆಯ ನೀರು ಅಕ್ಕಪಕ್ಕದ ಮನೆಗಳಿಗೆ ನುಗ್ಗಿ ಹಾನಿ ಉಂಟಾಗುತ್ತಿತ್ತು. ರಾಜಕಾಲುವೆಯನ್ನು ಎತ್ತರಿಸಿ ನೀರು ಸರಾಗವಾಗಿ ಹರಿಯಲು ಅನುಕೂಲ ಮಾಡಲಾಗಿದೆ.

ಶೆಟ್ಟಿಹಳ್ಳಿ ವಾರ್ಡ್ ನಲ್ಲೂ ಸಹ ಧಾರಾಕಾರ ಮಳೆ ಸುರಿದಾಗ ಮೇದರಹಳ್ಳಿಯ ಪಶ್ಚಿಮ ಕೌಂಟಿ ಬಳಿ ರಾಜಕಾಲುವೆ ನೀರು ಅಕ್ಕಪಕ್ಕದ ಮನೆಗಳಿಗೆ ನುಗ್ಗಿ ತೊಂದರೆಯಾಗುತ್ತಿತ್ತು ಈಗ 450 ಮೀಟರ್ ಉದ್ದದ ರಾಜ ಕಾಲುವೆಗೆ ತಡೆಗೋಡೆ ನಿರ್ಮಿಸಿ, ತ್ಯಾಜ್ಯ ತೆರವು ಗೋಳಿಸಲಾಗಿದೆ.
ಕಮ್ಮಗೊಂಡನಹಳ್ಳಿಯ ರಾಜಕಾಲುವೆ ಮತ್ತು ಎನ್ ಆರ್ ಆರ್ ಕಾಲೇಜು ಹತ್ತಿರದ ರಾಜ ಕಾಲುವೆಯ ತ್ಯಾಜ್ಯ ತೆರವು ಗೊಳಿಸಿ ತಡೆಗೋಡೆ, ತಂತಿ ಬೇಲಿ ನಿರ್ಮಿಸಿ ವಾಹನಗಳು ಬೇರೆಡೆ ಹೋಗಲು ರಾಜ ಕಾಲುವೆಯ ಮೇಲೆ ಬ್ರಿಡ್ಜ್ ನಿರ್ಮಿಸಲಾಗಿದೆ. ಈಗ ಮಳೆ ಬಂದರೂ ಸಹ ಅಕ್ಕಪಕ್ಕದ ಮನೆಗಳಿಗೆ ಹಾನಿ ಉಂಟಾಗುತ್ತಿಲ್ಲ ಎಂದು ಸ್ಥಳೀಯರು ಮಾಹಿತಿ ನೀಡಿದರು.

ಇ-ಪೇಪರ್: www.munjaneevartheepaper.com

ಸ್ಥಳೀಯ

# ತಾಳಿಕೋಟಿ ಸಮೀಪದ ಆಸ್ಕಿ, ಬೆಕಿನಾಳ, ಬೂದಿಹಾಳ(ಪಿ.ಟಿ) ಕೆರೆ ನೀರು ತುಂಬಿಸುವಂತೆ ಕೆರೆಯಲ್ಲಿಯೇ ಧರಣಿ ಕುಳಿತ ರೈತರು



ಕಲಕೇರಿ : ಸಮೀಪದ ಆಸ್ಕಿ ಕೆರೆಯಲ್ಲಿ ನೂರಾರು ರೈತರು ಆಸ್ಕಿ, ಬೆಕಿನಾಳ, ಹಾಗೂ ಬೂದಿಹಾಳ ಪಿ.ಟಿ ಕೆರೆ ನೀರು ತುಂಬಿಸುವಂತೆ ಕನರ್ಣಾಟಿಜಜಜುಟಿಟಿಜಜಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಮಂಗಳವಾರ ಬೆಳಿಗಿನಿಂದ ಅನಿದರ್ಣಾಟಿಜಜಜುಟಿಟಿಜಜಷ್ಟ ಸತ್ಯಾಗ್ರಹವನ್ನು ಹಮ್ಮಿಕೊಂಡು ಗ್ರಾಮದ ಮುಖ್ಯ ಭಜಾರದಿಂದ ಹಲಗಿ ಸದ್ದಿನೊಂದಿಗೆ ರೈತರು ವಿವಿಧ ಘೋಷಣೆಗಳನ್ನು ಕುಗುತ್ತಾ ಕೆರೆಯಡೆಗೆ ಹೆಜ್ಜೆ ಹಾಕುತ್ತಾ ಕೆರೆಗೆ ನೀರು ಹರೆಸುವವರೆಗೆ ಧರಣಿ ಮುಂದುವರೆಯುವುದು ಎಂಬುದು ಧರಣಿ ನಿರತರ ಬೇಡಿಕೆಯಾಗಿತ್ತು,

ಆಸ್ಕಿ ಗ್ರಾಮದ ರೈತ ಸಂಘದ ಅಧ್ಯಕ್ಷರಾದ ಸಂಗನಗೌಡ ಬಿರಾದಾರ ಅವರು ಮಾತನಾಡುತ್ತಾ ಈ ವರ್ಷದ ಭೀಕರ ಬರಗಾಲದ ನಿಮಿತ್ಯವಾಗಿ ಭಾಗದಲ್ಲಿ ಎಲ್ಲ ಹಳ್ಳ, ಕೆರೆಗಳು ಬತ್ತಿಹೋಗಿ ಬಾವಿ ಹಾಗೂ ಕೊಳವೆ ಬಾವಿಯಲ್ಲಿನ ನೀರು ಕಡಿಮೆಯಾಗಿ ಕೃಷಿಗೆ ನೀರಿಲ್ಲದೇ, ಜನ ಜಾನುವಾರುಗಳಿಗೆ ಕುಡಿಯಲು ಹನಿ ನೀರು ಇಲ್ಲದೇ ಹರಸಾಹಸ ಪಡುವಂತಾಗಿದೆ ಎಂದರು

ರೈತ ಸಂಘದ ತಾ. ಉಪಾಧ್ಯಕ್ಷರಾದ ಗೌಡಪ್ಪಗೌಡ ಹಳಿಮನಿ ಮಾತನಾಡುತ್ತಾ ಈ ವರ್ಷದಲ್ಲಿ ಅಡವಿಯಲ್ಲಿ ಮಾನವರಿಗೆ ಮತ್ತು ನಮ್ಮ ಧನಕರುಗಳಿಗೆ ಕುಡಿಯಲು ನೀರು ಸಿಗುತ್ತಿಲ್ಲ, ಆದ್ದರಿಂದ ಯಾರಿಗೆ ನೀರು ಕೇಳಬೇಕು ತಿಳಿಯುತ್ತಿಲ್ಲ, ಸಂಬಂದಿಸಿದ ತಾಲೂಕಾ ದಂಡಾಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳಿಗೆ, ಸಾಕಷ್ಟು ಬಾರಿ ಮನವಿ ಸಲ್ಲಿಸಿದರು ಪ್ರಯೋಜನವಾಗಿಲ್ಲ, ಕೂಡಲೇ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿ ನೀರು ಹರಿಸಬೇಕು ಎಂದದರು,

ಈ ವೇಳೆ ತಾಳಿಕೋಟಿ ತಾ ಅಧ್ಯಕ್ಷರಾದ ಶ್ರೀಶೈಲ ವಾಲಿಕಾರ ಅವರು ಮಾತನಾಡುತ್ತಾ ಈ ಕೆರೆಗಳಿಗೆ ನೀರು ಹರಿಸದಿದ್ದರೆ ಈ ಬಾಗದ ಆಸ್ಕಿ, ಬೆಕಿನಾಳ, ಬೂದಿಹಾಳ, ಜಲಪೂರ, ಬನ್ನೆಟ್ಟಿ, ನೀರಲಗಿ, ವಣಕ್ಯಾಳ ಗ್ರಾಮ ರೈತರು ಸೇರಿಕೊಂಡು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಹೋರಾಟ ಮಾಡುವುದು ಅನಿವಾರ್ಯವಾಗಲಿದೆ ಎಂದರು.

ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ, ಡಾ॥ ಪ್ರಭುಗೌಡ ಬಿರಾದಾರ, ಅಖಿಲ ಕನರ್ಣಾಟಿಜಜಜುಟಿಟಿಜಜಟಕ ರಾಜ್ಯ ಅನ್ನದಾತ ರೈತ ಸಂಘದ ಜಿಲ್ಲಾ ಯುವ ಘಟಕದ ಅಧ್ಯಕ್ಷರಾದ ಅನ್ವರ ಅವಟಿ ಬೆಂಬಲಿಸಿ ಮಾತನಾಡಿದರು, ಶಿವಶಂಕರ ಸಜ್ಜನ, ಲಿಂಗಣ್ಣ ನಾಯಕಲ್ ಮಾತನಾಡಿದರು.

ಅಧಿಕಾರಿಗಳ ಭೇಟಿ : ಧರಣಿ ಸ್ಥಳಕ್ಕೆ ಗ್ರಾಮ ಲೆಕ್ಕಾಧಿಕಾರಿಗಳಾದ ಪವನ ಬೆಂಕಿ, ಮತ್ತು . ಸರ್ಕಲ್ ವಿನೋದ ಸಿಂದಗಿರಿ ಅವರು ಮನವಿ ಕೊಡಿ ಮೇಲಾಧಿಕಾರಿಗಳಿಗೆ ತಿಳಿಸುತ್ತೆವೆ ಎಂದರು, ಆಗ ರೈತರು ಅದಕ್ಕೆ ಜಗದೇ ಸ್ಥಳಕ್ಕೆ ತಹಶಿಲ್ದಾರರು, ಹಾಗೂ ಸಂಬಂಧಿಸಿದ ಕೆ.ಬಿ.ಜೆ. ಎನ್.ಎಲ್ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಆಗಮಿಸಿ ಕೆರೆಗೆ ನೀರು ಹರೆಸುವವರೆಗೂ ನಾವೂ ಹೋರಾಟದಿಂದ ಎಳುವುದಿಲ್ಲ ಎಂದು ಪಟ್ಟು ಹಿಡಿದರು.

ಈ ವೇಳೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಉಪಾಧ್ಯಕ್ಷರಾದ ಶರಣಗೌಡ ಬಿರಾದಾರ, ತಾ. ಸಂಚಾಲಕರಾದ ಮಹಿಬೂಬ ಗೊಬ್ಬರಡಗಿ, ಗ್ರಾ.ಪಂ ಉಪಾಧ್ಯಕ್ಷರಾದ ಅಯ್ಯಪ್ಪ ಮುಗಳಿ, ರಾಮನಗೌಡ ಚೌದ್ರಿ, ಮಲ್ಲಪ್ಪ ಅಂಗಡಿ, ಮುತ್ತು ಹೂಗಾರ, ಗುರನಗೌಡ ಬಿರಾದಾರ, ಮಂಜು ಪಡಶೆಟ್ಟಿ, ಮಹದೇವಪ್ಪ ಮಾದರ, ವೆಂಕಣ್ಣ ಗುತ್ತ್ಯಾಳ, ಬಸವರಾಜ ಹಡಪದ, ಶಾಂತಗೌಡ ಬಿರಾದಾರ, ಪ್ರಭುಗೌಡ ಬಿರಾದಾರ, ಪ್ರಭುಗೌಡ ಹಳಿಮನಿ, ಶಂಕರ ಮಗದಾಳ, ದೇವಿಂದ್ರ ತುರಕನಗೇರಿ, ಬೆಕಿನಾಳ ಗ್ರಾಮದ ದೇವಿಂದ್ರಪ್ಪಗೌಡ ಪಾಟೀಲ, ಶ್ರೀಶೈಲ ಸಜ್ಜನ, ಮಲ್ಲಪ್ಪ ಮುದನೂರ, ಶ್ರೀಶೈಲ ಹಿರೇಮಠ, ರಾಮನಗೌಡ ಕರಕಳ್ಳಿ, ಲಕ್ಷ್ಮಣ ಚಲವಾದಿ, ಮರಲಿಂಗಪ್ಪ ನಾಟಿಕಾರ, ಮಡಿವಾಳಪ್ಪ ಸಜ್ಜನ, ಬೂದಿಹಾಳ ಗ್ರಾಮದ ಬಸನಗೌಡ ಪಾಟೀಲ, ಸಂತೋಷ ಕುಳಗೇರಿ, ಭೀಮನಗೌಡ ಬಿರಾದಾರ, ಶರಣಪ್ಪ ಹಯ್ಯಾಳ, ಜಟ್ಟೆಪ್ಪ ಮಾದರ ಸೇರಿದಂತೆ ಅನೇಕರು ಇದ್ದರು

ವರದಿ ಸುನೀಲ್ ಎಲ್ ತಳವಾರ ಮುಂಜಾನೆ ವಾರ್ತೆ ತಾಳಿಕೋಟಿ

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ–ಪೇಪರ್: www.munjaneevartheepaper.com
22 WEDNESDAY MAY 2024
22 ಬುಧವಾರ ಮೇ 2024

# ಮಾಜಿ ಸಂಸದ ಎಲ್.ಆರ್. ಶಿವರಾಮೇಗೌಡರ ವಿರುದ್ಧ ಪ್ರತಿಭಟನೆ

ಮದ್ದೂರು ಮಾಜಿ ಸಂಸದ ಎಲ್.ಆರ್. ಶಿವರಾಮೇಗೌಡ ಅವರು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಬಗ್ಗೆ ಲಘುವಾಗಿ ಮಾತನಾಡಿ, ಮಾತನಾಡುವ ಭರಾಟೆಯಲ್ಲಿ ದೇವೇಗೌಡರ ಸಾವನ್ನು ಬಯಸಿದ್ದಾರೆ ಎಂದು ಆರೋಪಿಸಿ ಬೆಸಗರಹಳ್ಳಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಜೆಡಿಎಸ್ ಕಾರ್ಯಕರ್ತರು ಬೆಸಗರಹಳ್ಳಿ ಗ್ರಾಮದಲ್ಲಿ ರಸ್ತೆತಡೆ ಮಾಡಿ ಪ್ರತಿಭಟಿಸಿದರು.

ಮಾಜಿ ಸಂಸದ ಎಲ್.ಆರ್. ಶಿವರಾಮೇಗೌಡ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಬಿತ್ತಿ ಪತ್ರಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.



ಜೆಡಿಎಸ್ ಪಕ್ಷದ ಯುವ ನಾಯಕ ಕೋಣಸಾಲೆ ಕೆ.ಜಿ.ಮಧುಸೂದನ್ ಅವರು ಮಾತನಾಡಿ, ಮಾಜಿ ಸಂಸದ ಎಲ್. ಆರ್. ಶಿವರಾಮೇಗೌಡ ಅವರು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಬಗ್ಗೆ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ಕುಟುಂಬದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವುದು ಸರಿಯಲ್ಲ. ಮಾತಿನ ಮೇಲೆ ಹಿಡಿತವಿಲ್ಲದೆ ಮಾತನಾಡಿದರೆ ಮುಂದಿನ ದಿನಗಳಲ್ಲಿ ಜೆಡಿಎಸ್ ಮುಖಂಡರು ಶಿವರಾಮೇಗೌಡರಿಗೆ ತಕ್ಕ ಶಾಸ್ತಿ ಮಾಡಲಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರದ್ದೋ ಸಮಾಧಿಯ ಮೇಲೆ ರಾಜಕಾರಣ ಮಾಡಲು ಹೊರಟಿರುವುದು ಅವರಿಗೆ ಶೋಭೆ ತರುವುದಿಲ್ಲ. ಎಚ್.ಡಿ. ದೇವೇಗೌಡ ಅವರು ಪ್ರಧಾನಮಂತ್ರಿಯಾಗಿ, ಎ□□.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿ ರಾಜ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಹಲವು ಮಂದಿಗೆ ರಾಜಕೀಯ ಜನ್ಮ ನೀಡಿರುವ ಎಚ್.ಡಿ. ದೇವೇಗೌಡ ಅವರ ಸಾವನ್ನು ಬಯಸಿರುವುದು ಹೇಯ ಕೃತ್ಯ ಎಂದು ಬೇಸರ ವ್ಯಕ್ತಪಡಿಸಿದರು.

ಜೆಡಿಎಸ್ ಪಕ್ಷ ಎಲ್.ಆರ್. ಶಿವರಾಮೇಗೌಡ ಅವರಿಗೆ ಕಳೆದ ಲೋಕಸಭೆಯ ಉಪಚುನಾವಣೆಯಲ್ಲಿ ಟಿಕೆಟ್ ನೀಡಿ, ಅವರ ಗೆಲುವಿಗೆ ಕಾರಣವಾಗಿತ್ತು. ಜೆಡಿಎಸ್ ಪಕ್ಷದಿಂದ ಗೆದ್ದು ಸಂಸತ್ ಪ್ರವೇಶಿಸಿದ್ದರು. ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಜೆಡಿಎಸ್ ವರಿಷ್ಠರನ್ನು ಮನಬಂದಂತೆ ನಿಂದಿಸಿ ಪಕ್ಷದಿಂದ ಉಚ್ಚಾಟನೆಯಾಗಿದ್ದರು. ಈಗ ಬಿಜೆಪಿ ಪಕ್ಷದಲ್ಲಿದ್ದು ಕಾಂಗ್ರೆಸ್ ಪಕ್ಷಕ್ಕೆ ಕೆಲಸ ಮಾಡುತ್ತಿರುವ ಇವರು ಅಪ್ರಬುದ್ಧ ರಾಜಕಾರಣಿಯಾಗಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂತಹ ರಾಜಕಾರಣಿಗಳಿಗೆ ಯಾವುದೇ ನೆಲೆ ಇರುವುದಿಲ್ಲ. ಕೂಡಲೇ ಬಹಿರಂಗವಾಗಿ ಇಲ್ಲವೇ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಕಾಲಿಗೆ ಬಿದ್ದು ರಾಜ್ಯದ ಜನರ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಮಂಡ್ಯ ಜಿಲ್ಲೆಗೆ ಬಂದಾಗ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ನೂರಾರು ಮಂದಿ ಭಾಗವಹಿಸಿದ್ದರು.

ಯಶ್ ಅಭಿಮಾನಿಗಳ ಸಂಘದ ಜಿಲ್ಲಾಧ್ಯಕ್ಷ ಕೆ.ವಿ. ಪ್ರಸಾದ್, ಗ್ರಾ.ಪಂ. ಸದಸ್ಯರಾದ ಎಂ.ಎಸ್. ಲೋಕೇಶ್, ಎಚ್.ಎಲ್. ದಯಾನಂದ, ಚನ್ನಕೇಶವ, ಮುಖಂಡರಾದ ಚುಂಚೇಗೌಡನದೊಡ್ಡಿ ನಾಗೇಶ, ಪಣ್ಣೆದೊಡ್ಡಿ ಹನುಮಂತ, ಶಿವನಂಜಯ್ಯ, ಹೊಸಕೆರೆ ಪ್ರಸನ್ನ, ಕಮಲಿ ಗಿರೀಶ್, ನಿಲುವಾಗಿಲು ರಾಧಾಕೃಷ್ಣ, ಹೊಟ್ಟೆಕುಮಾರ, ವೆಂಕಟೇಶ್, ಬಿ.ಆರ್. ವಾಸು, ಅಭಿಷೇಕ್ ಗೌಡ, ಕೋಣಸಾಲೆ ಬಾಬು, ಜಿ.ಕೆ ಬೇಕರಿ ಗೋವಿಂದ, ಬಿ.ಎಸ್. ಹರಿಪ್ರಸಾದ್ ಸೇರಿದಂತೆ ಇತರರಿದ್ದರು.

ಫೋಟೋಮಾಜಿ ಸಂಸದ ಎಲ್.ಆರ್. ಶಿವರಾಮೇಗೌಡ ಅವರು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಬಗ್ಗೆ ಲಘುವಾಗಿ ಮಾತನಾಡಿ, ಮಾತನಾಡುವ ಭರಾಟೆಯಲ್ಲಿ ದೇವೇಗೌಡರ ಸಾವನ್ನು ಬಯಸಿದ್ದಾರೆ ಎಂದು ಆರೋಪಿಸಿ ಬೆಸಗರಹಳ್ಳಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಜೆಡಿಎಸ್ ಕಾರ್ಯಕರ್ತರು ಬೆಸಗರಹಳ್ಳಿ ಗ್ರಾಮದಲ್ಲಿ ರಸ್ತೆತಡೆ ಮಾಡಿ ಪ್ರತಿಭಟಿಸಿದರು.

**ಸ್ಥಳೀಯ**

ಇ–ಪೇಪರ್: www.munjaneevartheepaper.com

## ಅಲ್ಟಿಯಮ್‌ನಿಂದ ಗಮನಾರ್ಹ ಹೂಡಿಕೆ

ಬೆಂಗಳೂರು: ಎಲೆಕ್ಟ್ರಾನಿಕ್ಸ್ ವಿನ್ಯಾಸ ಸಿಸ್ಟಂಗಳಲ್ಲಿ ಜಾಗತಿಕ ಮುಂಚೂಣಿಯಲ್ಲಿರುವ ಅಲ್ಟಿಯಮ್, ಭಾರತದ ಬೆಂಗಳೂರಿನಲ್ಲಿ ತನ್ನ ಅಸ್ತಿತ್ವವನ್ನು ವಿಸ್ತರಿಸಲಿದೆ, ನಗರದ ಹೃದಯಭಾಗದಲ್ಲಿ ಹೊಸದಾಗಿ ತೆರೆಯಲಾದ ಪ್ರೀಮಿಯಂ ಕಚೇರಿಯಲ್ಲಿ ಹೆಚ್ಚುವರಿ ತಾಂತ್ರಿಕ ಮತ್ತು ಮಾರಾಟ ಸಿಬ್ಬಂದಿಗಳಲ್ಲಿ ಗಮನಾರ್ಹ ಹೂಡಿಕೆಯನ್ನು ಇದು ಒಳಗೊಂಡಿದೆ.




ಭಾರತದಲ್ಲಿನ ಈ ಹೂಡಿಕೆ ಮತ್ತು ವಿಸ್ತರಣೆಯು ದೇಶದ ಮೇಕ್ ಇನ್ ಇಂಡಿಯಾ ಉಪಕ್ರಮವನ್ನು ನೇರವಾಗಿ ಬೆಂಬಲಿಸುತ್ತದೆ ಮತ್ತು ವಿಶ್ವಸ್ಥರದ ಎಲೆಕ್ಟ್ರಾನಿಕ್ಸ್ ಮಾರುಕಟ್ಟೆಯಲ್ಲಿ ಭಾರತಕ್ಕೆ ಹೆಚ್ಚಿನ ಉಪಸ್ಥಿತಿ ಮತ್ತು ಪ್ರಭಾವವನ್ನು ನೀಡಲು ಸಹಾಯ ಮಾಡುತ್ತದೆ.

"ಭಾರತವನ್ನು ಎಲೆಕ್ಟ್ರಾನಿಕ್ಸ್ ಉದ್ಯಮದ ಕೇಂದ್ರ ಬಿಂದುವನ್ನಾಗಿಸಲು ಆಲ್ಟಿಯಮ್ ಸಂಪೂರ್ಣವಾಗಿ ಬದ್ಧವಾಗಿದೆ. ಮಾರಾಟ–ಪೂರ್ವದಿಂದ ಮಾರಾಟ ಮತ್ತು ಮಾರ್ಕೆಟಿಂಗ್ ಮತ್ತು ಗ್ರಾಹಕ ಬೆಂಬಲದವರೆಗೆ ಗ್ರಾಹಕರ ತೊಡಗಿಸಿಕೊಳ್ಳುವಿಕೆಯ ಎಲ್ಲಾ ಅಂಶಗಳನ್ನು ಒಳಗೊಂಡಿರುವ ಒಂದು ಸಮರ್ಪಿತ ತಂಡವನ್ನು ಸ್ಥಾಪಿಸುವುದು ಅಲ್ಟಿಯಮ್‌ಗೆ ಭಾರತದಲ್ಲಿ ಸ್ಥಳೀಯ ಮಾರುಕಟ್ಟೆ ಅಗತ್ಯಗಳನ್ನು ಉತ್ತಮವಾಗಿ ಪರಿಹರಿಸಲು ಅನುವು ಮಾಡಿಕೊಡುತ್ತದೆ. ಹೊಸ ಮಾರುಕಟ್ಟೆಗಳಿಗೆ ತನ್ನ ನೇರ ವ್ಯಾಪ್ತಿಯನ್ನು ಬೆಳೆಸಲು ಮತ್ತು ವಿಸ್ತರಿಸಲು ಬಯಸುತ್ತಿರುವುದರಿಂದ ಅಲ್ಟಿಯಮ್‌ಗೆ ಇದು ಒಂದು ಪ್ರಮುಖ ಹೆಜ್ಜೆಯಾಗಿದೆ" – ಪೆಲ್ಲೆ ಚಿಯಾರಿ, –ಭಾರತದ ಜನರಲ್ ಮ್ಯಾನೇಜರ್ ಮತ್ತು ಮಾರಾಟ ಮುಖ್ಯಸ್ಥರು ಹೇಳಿದ್ದಾರೆ.

## 2ವರ್ಷಗಳ ಎಂಬಿಎ ಪರಿಚಯ

ಬೆಂಗಳೂರು: ಹರಿ ಶಂಕರ್ ಸಿಂಘಾನಿಯಾ ಸ್ಕೂಲ್ ಆಫ್ ಬ್ಯುಸಿನೆಸ್, ಉತ್ಪನ್ನ ನಿರ್ವಹಣೆಯಲ್ಲಿ ವಿಶೇಷತೆಯಿಂದ ಒಳಗೂಡಿದ ವಿಶಿಷ್ಟವಾದ 2–ವರ್ಷದ MBA ಕಾರ್ಯಕ್ರಮವನ್ನು ಪ್ರಸ್ತುತ ಪಡಿಸುತ್ತಿದೆ. ಇದನ್ನು ವಿದ್ಯಾರ್ಥಿಗಳಿಗೆ ಸಮಗ್ರ ಅಭಿವೃದ್ಧಿ ಅವಕಾಶಗಳನ್ನು ಒದಗಿಸುವಂತೆ ವಿನ್ಯಾಸಗೊಳಿಸಲಾಗಿದೆ.

ಪ್ರತಿಷ್ಠಿತ ಕಾರ್ಪೊರೇಟ್‌ಗಳು ಮತ್ತು ಸ್ಟಾರ್ಟ್‌ಅಪ್‌ಗಳೊಂದಿಗೆ ಖಾತರಿಪಡಿಸಿದ ಇಂಟರ್ನ್‌ಶಿಪ್‌ಗಳ ಜೊತೆಗೆ, ಹೆಚ್‌ಎಸ್‌ಬಿ ಕಾರ್ಪೊರೇಟ್ ನಾಯಕರುಗಳಿಂದ ವೈಯಕ್ತಿಕಗೊಳಿಸಿದ ಮಾರ್ಗದರ್ಶನವನ್ನು ಪಡೆಯುವುದನ್ನು ಖಚಿತಪಡಿಸುತ್ತದೆ ಹಾಗೂ ವೃತ್ತಿಪರ ಮತ್ತು ವೈಯಕ್ತಿಕ ಬೆಳವಣಿಗೆಯನ್ನು ಉತ್ತೇಜಿಸುತ್ತದೆ.

Accenture, InfoEdge, ಮತ್ತು MakeMyTrip




ನಂತಹ ಪ್ರಮುಖ ಕಂಪನಿಗಳೂ ಸೇರಿದಂತೆ ಸುಮಾರು, 30 ಕ್ಕೂ ಹೆಚ್ಚು ಗೌರವಾನ್ವಿತ ಕಂಪನಿಗಳೊಂದಿಗಿನ ಸಹಭಾಗಿತ್ವದಲ್ಲಿ, ವಿದ್ಯಾರ್ಥಿಗಳು ಎರಡು ತಿಂಗಳ ಇಂಟರ್ನ್‌ಶಿಪ್‌ಗಳನ್ನು, ಕನಿಷ್ಠ ಮಾಸಿಕ 1 ಲಕ್ಷ ರೂ. ನೊಂದಿಗೆ ಪಡೆದುಕೊಳ್ಳುವ ಸೌಲಭ್ಯವಿದೆ.

ಸದರಿ ಇಂಟರ್ನ್‌ಶಿಪ್‌ಗಳು ಕೇವಲ ಯಾವುದೇ ಇತರ ಇಂಟರ್ನ್‌ಶಿಪ್‌ಗಳಂತೆ ಇರುವುದಿಲ್ಲ, ಅವು ಹೆಚ್‌ಎಸ್‌ಬಿ ವಿದ್ಯಾರ್ಥಿಗಳಿಗೆ ಮಾತ್ರವೇ ಆಗಿದೆ. ಹೆಚ್ಚುವರಿಯಾಗಿ, ವಿದ್ಯಾರ್ಥಿಗಳು ಪ್ರಾರಂಭದಿಂದಲೇ ನಾಲ್ಕು ತಿಂಗಳ ಲೈವ್ ಪ್ರಾಜೆಕ್ಟ್‌ಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ ಹಾಗೂ ಅಮೂಲ್ಯವಾದ ಪ್ರಾಯೋಗಿಕ ಅನುಭವವನ್ನು ಪಡೆಯುತ್ತಾರೆ.




## ಗಾಂಧಿ ಮಂದಿರದಲ್ಲಿ ರಾಜೀವ್ ಗಾಂಧಿ ಪುಣ್ಯತಿಥಿ

ಸಾಗರ ಪಟ್ಟಣದ ಗಾಂಧಿ ಮಂದಿರದಲ್ಲಿ ಮಂಗಳವಾರ ಭಾರತ ರತ್ನ, ಮಾಜಿ ಪ್ರಧಾನ ಮಂತ್ರಿ ದಿ. ರಾಜೀವ್ ಗಾಂಧಿಯವರ ಪುಣ್ಯತಿಥಿ ಪ್ರಯುಕ್ತ ರಾಜೀವ್ ಗಾಂಧಿಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕಲಸೆ ಚಂದ್ರಪ್ಪನವರ ಅಧ್ಯಕ್ಷತೆ ವಹಿಸಿದ್ದರು. ಪ್ರಮುಖರಾದ ಹೊಳಿಯಪ್ಪ, ಗಿರೀಶ್ ಕೋವಿ, ಮಹಬಲೇಶ್ವರ ಕೌತಿ, ಕಿರಣ್ ದೊಡ್ಮನಿ, ಷಣ್ಮುಖ ಸೂರನಗದ್ದೆ, ಮೊದಲಾದ ಪ್ರಮುಖರು ಹಾಜರಿದ್ದರು.



ಮುಂಜಾನೆ ವಾರ್ತೆ ಸುದ್ದಿ ದುರ್ಗಮ್ಮದೇವಿಯ ಜಾತ್ರೆ ತಾಳಿಕೋಟಿ: ಪ್ರತಿ ಮೂರು ವರ್ಷಕೊಮ್ಮೆ ನಡೆಯುವ ಶ್ರೀ ಶಿವಶರಣ ಹರಳಯ್ಯ (ಸಮಗಾರ) ಸಮಾಜದ ಕುಲದೈವ ಶ್ರೀ ದುರ್ಗಮ್ಮ ದೇವಿ ಜಾತ್ರಾ ಮಹೋತ್ಸವವು ಮಂಗಳವಾರ ನೆರವೇ ರಿತು.

ಬೆಳಿಗ್ಗೆ ದುರ್ಗಮ್ಮ ದೇವಿಯ ಮೆರವಣಿಗೆಯು ಕೊಡೆಕಲ್ಲ ಅಗಸಿ (ವಡ್ಡರ ಓಣಿ)ಯಿಂದ ಹೊರಟು ಪಂಚೇಸಾಬ ದರ್ಗಾ ಮಾರ್ಗವಾಗಿ, ಕತ್ರಿ ಬಜಾರ ಮುಖ್ಯ ರಸ್ತೆ ಮೂಲಕ, ಅಂಬಾಭವಾನಿ ದೇವಸ್ಥಾನ, ನಂತರ ಸಮಗಾರ ಅಗಸಿ ಹತ್ತಿರ ಇರುವ ದುರ್ಗಮ್ಮ ದೇವಿ ದೇವಸ್ಥಾನದವರೆಗೆ ಮೆರವಣಿಗೆಯು ಡೊಳ್ಳುಕುಣಿತ, ಕರಡಿ ಮಜಲು, ವಿವಿಧ ವಾದ್ಯ-ವೈಭವದೊಂದಿಗೆ ನಡೆಯಿತು. ತದನಂತರ ದೇವಿಗೆ ಉಡಿ ತುಂಬುವ ಕಾರ್ಯಕ್ರಮ, ಮಹಾಪ್ರಸಾದ, ಸನ್ಮಾನ ಕಾರ್ಯಕ್ರಮ ನೆರವೇರಿತು. ತಹಶೀಲ್ದಾರ ಕೀರ್ತಿ ಚಾಲಕ ಹಾಗೂ ಪತ್ರಕರ್ತ ಜಿ.ಟಿ.ಘೋರ್ಪಡೆ ಅವರನ್ನು ಸನ್ಮಾನಿಸಲಾಯಿತು. ಸಮಾಜದ ಅಧ್ಯಕ್ಷ,ಉಪಾಧ್ಯಕ್ಷ ಪ್ರಮುಖರು ಉಪಸ್ಥಿತರಿದ್ದರು.

## ಗರ್ಭಕೋಶದಲ್ಲಿದ್ದ 4.5 ಕೆಜಿ ಗೆಡ್ಡೆ ಹೊರತೆಗೆದ ಡಾ.ವೆಂಕಟಸ್ವಾಮಿ

ಗುಂಡ್ಲುಪೇಟೆ: ಗರ್ಭಾಶಯ ಗಡ್ಡೆ ಮೂತ್ರಕೋಶದ ತನಕ ಬೆಳೆದು ಯಾತನೆ ಪಡುತ್ತಿದ್ದ ಮಹಿಳೆಯ ನೋವಿಗೆ ಗುಂಡ್ಲುಪೇಟೆ ತಾಲೂಕಿನ ಕಬ್ಬಹಳ್ಳಿ ಸಮುದಾಯ ಆರೋಗ್ಯ ಕೇಂದ್ರವು ಮುಕ್ತಿ ಕೊಟ್ಟಿದೆ. ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ 45 ವರ್ಷದ ಪುಟ್ಟಮ್ಮ ಎಂಬವರು ಯಶಸ್ವಿ ಶಸ್ತ್ರಚಿಕಿತ್ಸೆಗೊಳಗಾದ ಮಹಿಳೆ. ಸಾಮಾನ್ಯವಾಗಿ ಗರ್ಭಕೋಶದ ಹೊರಮೈ ಹಾಗೂ ಒಳಗಡೆ ಗೆಡ್ಡೆ ಬೆಳೆಯಲಿದೆ. ಆದರೆ, ಈ ಈ ಮಹಿಳೆಗೆ ಗರ್ಭಕೋಶ ಹಾಗೂ ಮೂತ್ರಕೋಶದ ನಡುವೆ ಗೆಡ್ಡೆ ಬೆಳೆದು ಎರಡು ಅಂಟಿಕೊಂಡಿದ್ದವು.



ವೈದ್ಯಕೀಯ ಲೋಕದಲ್ಲಿ ಅಪರೂಪವಾದ ಈ ಪ್ರಕರಣವನ್ನು ಸವಾಲಾಗಿ ಸ್ವೀಕರಿಸಿದ ಕಬ್ಬಹಳ್ಳಿ ಸಮುದಾಯದ ಆರೋಗ್ಯ ಕೇಂದ್ರದ ವೈದ್ಯ ಡಾ.ವೆಂಕಟಸ್ವಾಮಿ 2.5 ತಾಸು ಶಸ್ತ್ರಚಿಕಿತ್ಸೆ ನಡೆಸಿ 4.5 ಕೆಜಿ ತೂಕದ ಗೆಡ್ಡೆಯನ್ನು ಹೊರತೆಗೆದಿದ್ದಾರೆ. ಡಾ.ವೆಂಕಟಸ್ವಾಮಿ ಪ್ರತಿಕ್ರಿಯಿಸಿ, ಈ ಅಪರೂಪ ಪ್ರಕರಣದಲ್ಲಿ ಗೆಡ್ಡೆ ತೆಗೆಯುವುದೇ ಕಷ್ಟವಾಗಿತ್ತು. ಸದ್ಯ, ಮಹಿಳೆ ಆರೋಗ್ಯವಾಗಿದ್ದಾರೆ. ಕಬ್ಬಹಳ್ಳಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಈ ರೀತಿ ಕಠಿಣ ಶಸ್ತ್ರಚಿಕಿತ್ಸೆ ಇದೇ ಮೊದಲು ಎಂದರು

## ಶ್ರೀಲಂಕಾಗೆ ಇಂಡಿಯನ್‌ಆಯಿಲ್‌ನ ಎಕ್ಸ್‌ಪಿ 100 ರಫ್ತು

ಬೆಂಗಳೂರು: ಭಾರತದ ಇಂಧನ ಮೇಜರ್, ಇಂಡಿಯನ್ ಆಯಿಲ್, ನವಿ ಮುಂಬೈನ ನವ ಶೇವಾ, ಜವಾಹರಲಾಲ್ ನೆಹರು ಪೋರ್ಟ್ ಟ್ರಸ್ಟ್ (ಜೆಎನ್‌ಪಿಟಿ) ಯಿಂದ ಸುಪೀರಿಯರ್ 100 ಆಕ್ಟೇನ್ ಪ್ರೀಮಿಯಂ ಇಂಧನ ಎಕ್ಸ್‌ಪಿ 100ರ ಮೊದಲ ಪಾರ್ಸೆಲ್ ಅನ್ನು ಇಂದು ರಫ್ತು ಮಾಡಿದೆ. ಪ್ರೀಮಿಯಂ ಹೈ–ಎಂಡ್ ವಾಹನಗಳಿಗೆ ಅನುಗುಣವಾಗಿ, ಎಕ್ಸ್‌ಪಿ 100 ಶ್ರೀಲಂಕಾದಲ್ಲಿನ ತನ್ನ ಗ್ರಾಹಕರಿಗೆ ಉತ್ತಮ ಕಾರ್ಯಕ್ಷಮತೆಯನ್ನು ನೀಡಲು ಸಿದ್ಧವಾಗಿದೆ.

ಎಕ್ಸ್‌ಪಿ 100 ಅನ್ನು ಶ್ರೀಲಂಕಾಕ್ಕೆ ರಫ್ತು ಮಾಡುವ ಈ ಮೈಲಿಗಲ್ಲು ಇಂಡಿಯನ್ ಆಯಿಲ್‌ನ ಜಾಗತಿಕ ಶಕ್ತಿಯ ಆಟಗಾರನಾಗುವ ಮಹತ್ವಾಕಾಂಕ್ಷೆಯನ್ನು ಸಂಕೇತಿಸುತ್ತದೆ, ಇದು ಕಾರ್ಯಾಚರಣೆಗಳ ಪ್ರಮಾಣಕ್ಕಾಗಿ ಮಾತ್ರವಲ್ಲದೆ ಉತ್ಪನ್ನಗಳ ಗುಣಮಟ್ಟ ಮತ್ತು ಸುಸ್ಥಿರ ಭವಿಷ್ಯಕ್ಕಾಗಿ ಕೊಡುಗೆಗಳಿಗಾಗಿ ಗುರುತಿ ಸಲ್ಪಟ್ಟಿದೆ.

ಉದ್ಘಾಟನಾ ಸಾಗಣೆಯನ್ನು ಫ್ಲ್ಯಾಗ್ ಆಫ್ ಮಾಡುತ್ತಾ, ಇಂಡಿಯನ್ ಆಯಿಲ್ ನಿರ್ದೇಶಕ (ಮಾರ್ಕೆಟಿಂಗ್) ವಿ. ಸತೀಶ್ ಕುಮಾರ್ ಅವರು "ಇಂದು ನಮ್ಮ ಇನ್ನೊಂದು ಉತ್ಪನ್ನವು ಶ್ರೀಲಂಕಾದಲ್ಲಿ ಹೊಸ ಮಾರುಕಟ್ಟೆಗಳನ್ನು ವಶಪಡಿಸಿಕೊಳ್ಳಲು ಹೊರಡುತ್ತಿರುವಾಗ ಒಂದು ಮಹತ್ವದ ಸಂದರ್ಭವನ್ನು ಗುರುತಿಸುತ್ತದೆ. ಇದು ಮೂರನೇ ಬಾರಿಗೆ ನಾವು ಕಡಲಾಚೆಯ ಉತ್ಪನ್ನವನ್ನು ತೆಗೆದುಕೊಳ್ಳುತ್ತಿದ್ದೇವೆ, ಭಾರತದಿಂದ ವಿಶ್ವಕ್ಕೆ ಗುಣಮಟ್ಟದ ಉತ್ಪನ್ನಗಳನ್ನು ಕಳುಹಿಸುವ ನಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುತ್ತೇವೆ.ಈ ಉತ್ಪನ್ನವು ವ್ಯಾಪಕ ಗೋಚರತೆ ಮತ್ತು ಸ್ವೀಕಾರಾರ್ಹತೆಯನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ನಾವು ಸಮಗ್ರ ಪ್ರಚಾರ ಯೋಜನೆಗಳನ್ನು ರೂಪಿಸಿದ್ದೇವೆ.

# ಛಾಯಾಚಿತ್ರ ಗ್ರಾಹಕರಿಗೆ ರಕ್ಷಣೆ ನೀಡುವಂತೆ ತಹಶಿಲ್ದಾರ್ ಮುಖಾಂತರ ಗೃಹಮಂತ್ರಿ ಡಾ.ಜಿ.ಪರಮೇಶ್ವರ್ ಅವರಿಗೆ ಮನವಿ

ಮಾಲೂರು: ವೃತ್ತಿಪರ ಛಾಯಾ ಚಿತ್ರಗ್ರಾಹಕರ ಮೇಲಿನ ಹಲ್ಲೆ ಖಂಡಿಸಿ ಹಾಗೂ ವೃತ್ತಿಪರ ಛಾಯಾಚಿತ್ರ ಗ್ರಾಹಕರಿಗೆ ರಕ್ಷಣೆ ನೀಡುವಂತೆ ತಾಲ್ಲೂಕು ಛಾಯಗ್ರಾಹಕರ ಸಂಘದ ಅಧ್ಯಕ್ಷ ವಿ.ರವಿ ನೇತೃತ್ವದಲ್ಲಿ ತಹಶಿಲ್ದಾರ್ ಮುಖಾಂತರ ಗೃಹಮಂತ್ರಿ ಡಾ.ಜಿ.ಪರಮೇಶ್ವರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ದಿನಾಂಕ 18ರಂದು ಬೆಂಗಳೂರಿನ ಶಿವಾಜಿನಗರದ ಶಮ್ಸ್ ಕಲ್ಯಾಣ ಮಂಟಪದಲ್ಲಿ ಕಾರ್ಯನಿರತ ಛಾಯಾಚಿತ್ರ ಗ್ರಾಹಕರ ಮೇಲೆ ಏಕಾಏಕಿ ಹಲ್ಲೆ ನಡೆಸಿ ಛಾಯಾಗ್ರಾಹಕನ ಕ್ಯಾಮರಾ ಸಲಕರಣೆಗಳನ್ನು ನಾಶಮಾಡಿದ್ದಾರೆ. ಈ ಘಟನೆಯು ನಾಡಿನ ಸಮಸ್ತ ವೃತ್ತಿಪರ ಛಾಯಾಚಿತ್ರಗ್ರಾಹಕರ ಮೇಲೆ ತೀವ್ರತರವಾದ ಆಘಾತ ಉಂಟುಮಾಡಿದೆ, ಛಾಯಾಗ್ರಾಹಕರ ಕುಟುಂಬಗಳು ತುಂಬಾ ನೋವನ್ನು ಅನುಭವಿಸುವಂತಾಗಿದೆ. ಅದರಲ್ಲೂ

ಇತ್ತೀಚೆಗೆ ಸಾಕಷ್ಟು ಕಲ್ಯಾಣ ಮಂಟಪಗಳಲ್ಲಿ ಕ್ಯಾಮರಾ ಪರಿಕರಗಳ ಕಳ್ಳತನ, ಸ್ಟುಡಿಯೋಗಳ



ಕಳ್ಳತನ, ಛಾಯಾಗ್ರಾಹಕರನ್ನು ರಸ್ತೆಗಳಲ್ಲಿ ತಡೆದು ಕ್ಯಾಮರಾ ಪರಿಕರಗಳನ್ನು ಕಿತ್ತುಕೊಂಡು ಹೋಗುವುದು ಸೇರಿದಂತೆ ಅನೇಕ ಪ್ರಕರಣಗಳು ನಡೆದಿದೆ, ನಡೆಯುತ್ತಲೇ ಇವೆ. ಇತ್ತೀಚೆಗೆ ಕ್ಯಾಮರಾ ಉದ್ಯಮ ಡಿಜಟಲೀಕರಣವಾದ ಮೇಲೆ ಕ್ಯಾಮರಾ ಪರಿಕರಗಳ ಬೆಲೆಯೂ ಹೆಚ್ಚಾಗಿದ್ದು, ಕ್ಯಾಮರಾ ಪರಿಕರಗಳ ಮೇಲೆ ಕಳ್ಳಕಾಕರ ಕಣ್ಣು ನಮ್ಮ ವೃತ್ತಿಪರರ ಮೇಲೆ ಬಿದ್ದಂತಿದೆ, ಇಂತಹ ಕಳ್ಳಕಾಕರಿಂದ ನಮ್ಮ ಛಾಯಾಗ್ರಾಹಕರನ್ನು ರಕ್ಷಿಸಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇವೆ.

ಈ ಹಿಂದೆ ರಾತ್ರಿ ವೇಳೆಯಲ್ಲಿ ವೃತ್ತಿಯ ವಿಚಾರವಾಗಿ ಓಡಾಡುವ ಛಾಯಾಗ್ರಾಹಕರಿಗೆ ಪೋಲೀಸ್ ಅನುಮತಿಯ ಪತ್ರವನ್ನೂ ಸಹ ನೀಡಿರುತ್ತೀರಿ, ಅದಕ್ಕಾಗಿ ನಾವುಗಳು ಕೃತಜ್ಞತೆ ಸಲ್ಲಿಸುತ್ತಿದ್ದೇವೆ.

ಶಿವಾಜಿನಗರದಲ್ಲಿ ನಡೆದ ಅಮಾನುಷ್ಯ ಕೃತ್ಯವನ್ನು ನಾಡಿನ ಸಮಸ್ತ ಛಾಯಾಗ್ರಾಹಕರು ಅತೀವವಾಗಿ ಖಂಡಿಸುತ್ತಿದ್ದೇವೆ,

ಈ ಘಟನೆಯಲ್ಲಿ ತೊಂದರೆಗೊಂಡ ಛಾಯಾಗ್ರಾಹಕರಿಗೆ ನ್ಯಾಯವನ್ನು ಕೊಡಿಸಿಕೊಡಬೇಕೆಂದು ಈ ಮೂಲಕ ನಾಡಿನ ಸಮಸ್ತ ಛಾಯಾಗ್ರಾಹಕರ ಪರವಾಗಿ ನ್ಯಾಯ ಒದಗಿಸಿ ರಕ್ಷಣೆ ನೀಡುವಂತೆ ಒತ್ತಾಯಸುತ್ತೇವೆ.

ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ಶಿವಮೂರ್ತಿ, ಖಜಾಂಚಿ ಎಂ.ಜಿ ನಟರಾಜ್, ಪದಾಧಿಕಾರಿಗಳು ಎಸ್.ಪ್ರಶಾಂತ್, ಸೋನಿ, ಗ್ರೇಷನ್, ಅಲ್ಮೇಡ, ಶೇಖರ್, ರಾಮಮೂರ್ತಿ, ಸತೀಶ್, ಸುರೇಶ್, ಲಕ್ಷ್ಮೀ ನಾರಾಯಣ್, ಚಂದ್ರಶೇಖರ್, ನವೀನ್, ನಾರಾಯಣ, ಸಂದೀಲ್, ಚಂದನ್, ಸುನೀಲ್, ಚಲಪತಿ, ಮೋನಿಷ್ ಹಾಗೂ ಹಲವಾರು ಸದಸ್ಯರುಗಳು ಭಾಗವಹಿಸಿದ್ದರು.

□ಗೋಪಾಲಕೃಷ್ಣ– ಮಾಲೂರು (ಕೋಲಾರ)

MUNJANEVARTHE KANNADA DAILY, EDITOR, PRINTER PUBLISHED And OWNED BY H.L.Amaranth, and Printed at: Sree Manjunatha enterprises, No.30Subbannachan Lane 1st Cross, Cottenpet Bangalore-560053, MOB: 91414 14119 Published at: No.97, 2nd Cross, Vivekananda Nagar, Khadi commision layout, BSK 3rd Stage, Katharaguppe Main Road, Bangalore 560085